Mr. SPEAKER.—Now we will take up the Bill clause by clause. Clause 2.

Sri Kadidal MANJAPPA.—Sri, I beg to move that at the end of the proposed sub-section 1-A of clause 2 item (i), the following proviso may be added:—

> "Provided that the monthly or quarterly instalment shall be collected only at the expiry of the month or quarter, as the case may be, in respect of which the instalment is payable."

Mr. SPEAKER.—That would satisfy the Hon'be Members.

Sri Kadidal MANJAPPA.—This is intended to meet the objections raised by the Hon'ble Members that sales-tax should not be collected and levied in the absence of turnover. Therefore, we propose to collect sales-tax only at the end of the month or quarter after there is a turnover.

Mr. SPEAKER.—The question is:

> "At the end of the proposed sub-section 1-A of Clause 2, item (i), the following proviso shall be added :—
>
> "Provided that the monthly or quarterly instalment shall be collected only at the expiry of the month or quarter, as the case may be, in respect of which the instalment is payable."

The motion was adopted.

Mr. SPEAKER.—The question is :

> "That Clause 2 as amended shall stand as part of the Bill."

The motion was adopted.

Clause 2 as amended was added to the Bill.

Mr. SPEAKER.—Clause 3. There is no amendment to this clause. The question is:

> "That Clause 3 stand part of the Bill."

The motion was adopted.

Clause 3 was added to the Bill.

Mr. SPEAKER.—Clause 1, Title and Preamble. The question is:

> "That Clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri Kadidal MANJAPPA (Minster for Revenue and Public Works).—Sir, I beg to move that:

> "That the Madras General Sales Tax (Mysore Amendment) Bill, 1955, as amended, be passed."

Mr. SPEAKER.—The question is:

> "That the Madras General Sales Tax (Mysore Amendment) Bill, 1955, as amended, be passed."

The motion was adopted.

THE MYSORE SALES TAX (SECOND AMENDMENT) BILL, 1955.

Motion to consider.

Sri Kadidal MANJAPPA (Minister for Revenue and Publi Works).—Sir, I beg to move:

> "That the Mysore Sales Tax (Second Amendment) Bill, 1955, be taken into consideration."

I am sure that Hon'ble Members are aware that while we considered the the Bill to amend the Sales Tax Act last year, we intended to give a certain amount of relief to beedi manufacturers and manufacturers of cigarettes of inferior variety. At that time, in Madras, there was no sales-tax for beedis and in the case of inferior cigarettes, the tax leviable in Madras was very low. Therefore, with a view to give relief to the local manufacturers, we levied sales-tax in the case of beedis at the rate of one pie per rupee and in the case of inferior variety of cigarettes of lesser rates at three pies per rupee.

Now in Madras, they have enacted a measure providing for the levy of

(SRI KADIDAL MANJAPPA.)

sales-tax at the rate of six pies in the case of beedis and in the case of cigarettes at the rates of 3 1/8 per cent. That Bill has been passed in the Madras Legislature. Now, according to this Bill, we propose to levy sales-tax on beedis at three pies per rupee and 3 1/8 per cent in the case of inferior variety of cigarettes. We have introduced this measure with the idea of preventing leakage of revenue. . . .

Sri J. MOHAMED IMAM (Jagalur).—What about Bombay ?

Sri Kadidal MANJAPPA.—As the Hon'ble Member knows, about 75 per cent of the beedis consumed in the State are manufactured in Madras and the major portion of the sales-tax that we collect from beedi manufacturers is from the Mangalore Beedi Manufacturers.

Sri J. MOHAMED IMAM.—What about leakage ?

Sri Kadidal MANJAPPA.—Suppose we retain a lower rate and Madras enhances the rates as they have already proposed. Then there will be smuggling from Mysore to Madras and we will lose a considerable amount of revenue. If, on the other hands, the goods are smuggled into the State, the local manufacturers will be hit hard. They will not be in a position to. . . .

Sri D. DEVARAJ URS (Hunsur).—The Hon'ble Minister was pleased to say that if we did not enhance the tax from one pie to three pies, beedis would be smuggled from Mysore to Madras and we lose the tax. If the goods are smuggled into Madras, at the other end they will have to pay more as sales-tax. Why do they want to pay more ?

Sri Kadidal MANJAPPA.—It can happen both ways. Suppose Mysore beedis are smuggled into Madras without payment of sales-tax and there they sell it to the consumer without the notice of the authorities at a cheaper rate by evading payment of sales-tax . . .

Sri D. DEVARAJ URS.—Evation of sales-tax is always there whether you enhance from one pie to three pies or reduce. Evation is different from smuggling irrespective of increasing or decreasing the rate.

Mr. SPEAKER.—It is a fact also. Here the prices are less and there the prices of beedis are more. Therefore, it is natural there will be a flow from this place to another.

Sri D. DEVARAJ URS.—Compared to Madras the sales-tax is less here. The manufacturers here are the gainers as they pay less sales-tax. When such is the case, does a manufacturer evade paying tax here and smuggle his goods to Madras, where more tax has to be paid ?

Mr. SPEAKER.—These are taxed at the source. Therefore Madras will not get the tax but it is the smuggler who profits.

Sri Mulka GOVINDA REDDY (Chitaldrug).—The Hon'ble Minister was telling us that 75 per cent of the beedis are imported from Madras. When such is the case, I do not know how he can think that these beedis can be smuggled from Mysore into Madras ?

1-30 P.M.

Sri Kadidal MANJAPPA.—If we retain the rule without amending and if the Madras Government have raised their sales-tax to 6 pies in a rupee, the tendency on the part of the Mysore manufacturers would bento sell their goods in Madras by evading sales-tax. On account of the long stading habit of the people to smuggle certain brands of beedis manufactured in Madras . . . .

*Sri K. PATTABHIRAMAN (Kolar).—One clarification, Sir. The impression that we have is that the beedis that come from outside Mysore have a better market here and as a matter of fact the sales-tax amount that you collect as between the Mysore dealer and the outside dealer, you get more from the outside dealer. Therefore the attraction for the outside dealer to sell in Mysore should have been more important. Now you are going to say that opportunity here will be less for smuggling to outside. Is it not an apparent contradiction ?

Sri Kadidal MANJAPPA.—I have also said that the tendency is there for

the Madras manufacturers to dump their beedis here and then compete with the local manufacturers. I do not know when I stated that that tendency also will be there.

Sri K. PATTABHIRAMAN.—If that is so, your raising the sales-tax from one pie to three pies would affect adversely our local trade and to that extent, the market which is already available at the present rate to an outsider, will be enhanced and his market facilities will be greater. To that extent the advantage of the local dealer will suffer.

Sri Kadidal MANJAPPA.—I was submitting, nearly 75 per cent of the tax that we collect now on account of the beedis comes from the outsiders—non-Mysoreans. That is the reason why we should enhance the tax also to prevent the competition to some extent.

Sri K. PATTABHIRAMAN.—May I request the Hon'ble Member to furnish the figures of sales-tax that would be collected ?

Sri Kadidal MANJAPPA.—If the Madras merchant pays the sales-tax at the single point and distribute there will be advantage to our local manufacturers as suggested by the Hon'ble Members. Supposing the goods are smuggled into Mysore State and distributed among the retailers, then we lose a considerable portion of the revenue.

Sri K. PATTABHIRAMAN.—Don't you think the Mysore Dealer is at a greater disadvantage and you are ruining him further ? As a matter of fact, if I remember the figures that were placed on the floor of this House when we discussed the question of beedi during the last session, it was suggested that the levying of sales-tax on the beedis will not really help the Mysorean manufacturers because they were in the ratio of 1 : 2 or 1 : 3. The collection was from non-Mysoreans, and that was what was argued then. Now here is an attempt made to increase it to three pies. Don't you really think that you are hitting hard the local dealers ?

Sri Kadidal MANJAPPA.—The local dealer was paying up to 1st April 1955 at the rate of one pie in a rupee. We want to retain it. We want to enhance it to 3 pies only. We thought that he would get some sort of protection here. On the other hand he will not get any protection; he will be put to some inconvenience and there is likelihood of our losing our precious revenue. Therefore in the interest of the State we have to enhance the rate to some extent to be at par with the Madras rate. The Hon'ble Members may remember that, when we introduced the Bill last year to enhance the rates to be at par with the Madras rates, similar arguments were advanced then. But considering all aspects of the case, I would like to submit that it is in the interest of the State to enhance these rates. After all the beedi manufacturers were paying till 1st April 1955 three pies in a rupee. We want to retain that rate, but not one pie in a rupee.

Sri K. PATTABHIRAMAN.—To that extent you are increasing the disadvantage over the local dealer who is already hit-hard; you are hitting him further.

Sri Kadidal MANJAPPA.—He is not hit-hard. He was paying till now three pies; we want to collect at the rate of three pies only. In Madras, I am told, there is a proposal to levy at the rate of 6 pies in a rupee.

Sri J. MOHAMED IMAM (Jagalur).—Is it to the interest of beedi manufacturers or in the interest of the smokers or in the interest of the Government, I want to know, because "interest of the State" is such a comprehensive term ?

Sri Kadidal MANJAPPA.—It is in the interest of the Government revenue primarily and in the interest of the beedi manufacturers too. I explained the position to you just a few minutes back.

Sri J. MOHAMED IMAM.—Have the Government consulted the representatives of the beedi manufacturers and ascertained their views ? How do you say it is in their interest ?

Sri Kadidal MANJAPPA.—In all these things, we cannot go on consulting the representatives concerned. Did we consult the representatives of the

(SRI KADIDAL MANJAPPA.)

growers when we introduced the Agricultural Income-tax Bill?

Sri J. MOHAMED IMAM.—I beg to differ from you. When you introduced the Agricultural Income-tax Bill you never said it was in the interest of the raiyats. But here you are giving a positive statement that the levy of three pies sales-tax is to the interest of the beedi manufacturers. I would like to know whether your statement is supported by the representatives of the local beedi manufacturers?

Sri Kadidal MANJAPPA.—It is common knowledge Sir, primarily the State would benefit on account of the proposed enhanced rate.

Sri K. PATTABHIRAMAN.—Let us have the figures of the income derived from such a levy in the ratio of Mysore dealer and non-Mysorean dealer.

Sri Kadidal MANJAPPA.—We get about Rs. 1½ lakhs more if it is raised to 3 pies.

Sri K. PATTABHIRAMAN.—In the ratio of Mysore dealer *versus* the non-Mysore dealer, because you have given figures. I myself raised the question of beedis when this question of sales-tax was introduced and it was suggested that the ratio was not less than 1 : 2 but possibly 1 : 3. So, if one lakh is collected, it would be in the ratio of Rs. 30,000 *versus* Rs. 60,000.

Sri Kadidal MANJAPPA.—Even if that argument is conceded, after all 75 per cent of the dealers are Madrasis; they will pay the tax. In order to safegaurd the interest of 25 per cent dealers, the State will lose a major portion of the income.

Sri K. PATTABHIRAMAN.—For the sake of Rs. 30,000, he is ruining the local industry. After all, the prosperity of the state is entirely based upon the several classes of people who contribute to that prosperity. Here is an attempt made to sacrifice the interest of a small sector in order to get Rs. 60,000 from outside beedis. You are sacrificing the local industry which is already hit hard. Is there any justification in enhancing the rate? I appeal to the Hon'ble Minister to consider this aspect of the matter.

Sri P. R. RAMAIYA (Basavanagudi).—I understand this enhancement will hit the beedi smokers, the beedi manufacturers and the Madras sellers and the local sellers. Sir, the Government would no doubt get some more revenue on account of the increase. I want to make a plea that they will get some more revenue if they tax snuff also. I want snuff also to be included in the Bill.

Sri Kadidal MANJAPPA.—We are levying tax in the case of snuff also.

Sri P. R. RAMAIYA.—Is it in proportion to the beedis?

Sri Kadidal MANJAPPA.—Yes.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.-ನರಸೀಪುರ).—ಸ್ವಾಮಿ, ನನಗೆ ಒಂದು ವಿಷಯ ತಿಳಿಯಲಿಲ್ಲ. ಮದ್ರಾಸಿನಲ್ಲಿ ಒಬ್ಬ ಬೀಡಿ ತಯಾರು ಮಾಡುವ ವರ್ತಕನಿದ್ದು, ಮೈಸೂರಿನಲ್ಲಿ ಆ ಬೀಡಿಗೆ ಗಿರಾಕಿಯಿದ್ದರೆ, ಆತನು ಮೈಸೂರಿಗೆ ಬೀಡಿ ಕಳುಹಿಸಿದರೆ, ಮೈಸೂರಿನಲ್ಲಿ ಸಿಂಗಲ್ ಪಾಯಿಂಟ್ ಸೇಲ್ಸ್ ಟ್ಯಾಕ್ಸ್ ಇರುವುದರಿಂದ, ಆ ಸೇಲ್ಸ್ ಟ್ಯಾಕ್ಸ್ ಎಲ್ಲಿ ವಸೂಲಾಗುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ಆತನು ಹೋಲ್ ಸೇಲರಿಗೆ ಕೊಟ್ಟರೆ ಅಲ್ಲಿ ವಸೂಲಾಗುತ್ತದೆ; ಹಾಗಿಲ್ಲದೆ ರಿಟೇಲರ್ಸ್‌ಗೇ ಕೊಟ್ಟರೆ ವಸೂಲಾಗುವುದಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ರಿಟೇಲ್ ವರ್ತಕರಿಗೆ ಹಂಚಿಕೆ ಮಾಡುವುದಕ್ಕೆ ಹೋಗುವವರೆಗೂ ನೀವೇನು ಸುಮ್ಮನೆ ಇರುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಸುಮ್ಮನೆ ಇರುವುದಿಲ್ಲ. ಆದರೂ ಕೂಡ ಅನೇಕಸಾರಿ ಸರ್ಕಾರದವರಿಗೆ ಮೋಸವಾಗುತ್ತದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಅಂಥಾದ್ದು ಕಡಮೆ. ಹೋಲ್ ಸೇಲರ್ಸ್ ಮುಖಾಂತರವೇ ಬಂದು ಮೈಸೂರಿನಲ್ಲಿ ಹೆಚ್ಚಿಗೆ ವ್ಯಾಪಾರವಾಗುವುದರಿಂದ ಸರ್ಕಾರಕ್ಕೆ ಹೆಚ್ಚಿಗೆ ವರಮಾನ ಬರುವುದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಅವನು ಒಂದುವೇಳೆ ಅಲ್ಲಿ ಆರುಕಾಸು ಸೇಲ್ಸ್ ಟಾಕ್ಸನ್ನು ಕೊಡುವುದನ್ನು ತಪ್ಪಿಸಿಕೊಂಡು ಇಲ್ಲಿಗೆ smuggle ಮಾಡಿದರೆ, ಇಲ್ಲಿ ಒಂದೇ ಕಾಸು ಸೇಲ್ಸ್ ಟಾಕ್ಸ್ ಕೊಟ್ಟು ಮಾರಿ ಲಾಭ ಹೊಂದಬಹುದು, ಅದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಕಳ್ಳಸಾಗಾಣಿಕೆಯ ಮಾತುಬೇಡ. ಏನೇ ಮಾಡಿದರೂ ಕಳ್ಳತನ ಮಾಡುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಸೇಲ್ಸ್ ಟಾಕ್ಸ್ ಮೈಸೂರು ದೇಶದಲ್ಲಿ ಕಡಮೆ ಇರುವುದರಿಂದ, ಇವೊತ್ತು ಸಾವಿರ ರೂಪಾಯಿ ವ್ಯಾಪಾರ ಮಾಡುವ ಹೋಲ್‌ಸೇಲ್ ವರ್ತಕ ಇನ್ನು ಮೇಲೆ ಇನ್ನೂ ಹೆಚ್ಚಿಗೆ ಮಾಲು ತಂದು ವ್ಯಾಪಾರಮಾಡಿ ತನ್ನ turnover ಜಾಸ್ತಿ ಮಾಡಿದರೆ ಹೆಚ್ಚಿಗೆ ನಮಗೆ ವರಮಾನ ಬರುವಂತಾಗುವುದಿಲ್ಲವೇ? ಈಗ ಅಲ್ಲಿಂದ ಎಷ್ಟು ಕಳುಹಿಸುತ್ತಾರೋ ಅದಕ್ಕೆ ನಾಲ್ಕರಷ್ಟು ಇನ್ನು ಮುಂದೆ ಕಳುಹಿಸುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ನಾಲ್ಕರಷ್ಟು ಕಳುಹಿಸುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಅಲ್ಲದೆ, ಹೊರಗಿನವನು ಒಂದೇಕಾಸು ಸೇಲ್ಸ್ ಟಾಕ್ಸ್ ಕೊಟ್ಟು ನಮ್ಮ dealers ಜೊತೆಗೆ compete ಮಾಡುತ್ತಾನೆ.

Sri V. M. MASCARENHAS (St. John's Hill).—May I say a word, Sir? Today our sales-tax in Mysore is only one pie in a rupee and in Madras there was no sales-tax on the beedis. Now the Madras Government is very keen in levying tax on the beedis, *viz.*, six pies in a rupee. The Madras dealer will dump his beedis in Mysore and pay sales-tax to that extent, and thereby we will be getting more revenue to the Government. Today about $\frac{3}{4}$th of the beedi trade is in the hands of the Madras merchants. If we levy this sales-tax, do you mean to say that we should not get 75 per cent sales-tax from outsiders?

ಶ್ರೀ ಡಿ. ದೇವರಾಜಅರಸ್ (ಹುಣಸೂರು).—ಮದ್ರಾಸಿನಲ್ಲಿ ತಯಾರಾಗುವ ಬೀಡಿಯ $\frac{3}{4}$ ಭಾಗ ಮೈಸೂರಿನಲ್ಲಿ ಖರ್ಚಾಗುತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

Mr. SPEAKER.—Motion moved:

"That the Mysore Sales Tax (Second Amendment) Bill, 1955, be taken into consideration."

*ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಈಗತಾನೆ ಮಾನ್ಯ ಸಚಿವರು ಈಗ ಈ ಬೀಡಿ ಇತ್ಯಾದಿಗಳ ಮೇಲೆ ಇಲ್ಲಿಯ ತನಕ ಇದ್ದಂಥ ಒಂದುಕಾಸಿನ ತೆರಿಗೆಯ ಬದಲಾಗಿ ಅದನ್ನು ಮೂರುಕಾಸುಗಳಿಗೆ ಹೆಚ್ಚಿಸಬೇಕೆಂದು ಈಗ ತಿದ್ದುಪಡಿಯನ್ನು ತರಲಾಗಿದೆ ಎಂದು ಹೇಳಿದ್ದಾರೆ. ಆದರೆ ದೇಶದಲ್ಲಿರತಕ್ಕಂಥ ಇನ್ನೂ ಇತರ ಎಷ್ಟೋ ಸಾಮಾನುಗಳಮೇಲೆ ಹೀಗೆ ತೆರಿಗೆ ವಿಧಿಸಲು ಅವಕಾಶ ವಿದ್ದಾಗ್ಯೂ ಅವುಗಳಬಗ್ಗೆ ಯಾವ ಒಂದು ಮಸೂದೆಯನ್ನೂ ತರದೆ ಕೇವಲ ಈ ಬೀಡಿಗಾಗಿ ಈಗ ಇದನ್ನು ತಂದಿದ್ದಾರೆ. ಇದರಿಂದ ದೇಶದಲ್ಲಿ ಈ ದಿವಸ ಈ ಬೀಡಿಸುತ್ತುವ ಕೈಗಾರಿಕಯುವರಿಗೆ ತುಂಬ ತೊಂದರೆಯಾಗುತ್ತದೆಂದು ನಾನೀಗ ಈ ಮಾನ್ಯಸಭೆಗೆ ತಿಳಿಸಬೇಕಾಗಿದೆ. ಈಗ ತಾನೆ ನಮ್ಮ ಮಾನ್ಯ ಸಚಿವರು ನಮ್ಮ ದೇಶದಲ್ಲಿ ಕನ್ಸ್ಯೂಂ ಆಗತಕ್ಕಂಥ ಬೀಡಿಯ ಪ್ರಮಾಣದಲ್ಲಿ ಕೇವಲ ನಾಲ್ಕನೆ ಒಂದು ಭಾಗದಷ್ಟು ನಮ್ಮ ಮೈಸೂರಿನಲ್ಲಿ ತಯಾರಾಗುತ್ತಿದೆ ಎಂದು ಹೇಳಿದರು. ಹಾಗೇ ಇಟ್ಟುಕೊಳ್ಳೋಣ. ಈಗ ನಮ್ಮ ಮೈಸೂರಿಗೆ ಈ ಬೀಡಿಸುತ್ತಲು ಹೊಗೇಸೊಪ್ಪು ಹೊರಗಡೆಯಿಂದ ಬರುವುದಿಲ್ಲ. ಬೀಡಿಸುತ್ತುವುದಕ್ಕೆ ಪ್ರಸಿದ್ಧಿಹೊಂದಿದಂಥ ಹೊಗೆಸೊಪ್ಪು ತಯಾರಾಗುವುದು ಗುಜರಾತ್ ಮತ್ತು ನಿಪ್ಪಾಣಿ ಇತ್ಯಾದಿ ಪ್ರದೇಶದಲ್ಲಿ. ಅಲ್ಲಿಂದ ನಮ್ಮ ಸೀಮೆಗೆ ಆ ಸೊಪ್ಪು ಬರುವುದು ಬಹಳ ಕಡಿಮೆ. ನಮ್ಮ ಸೀಮೆಯಲ್ಲಿ ಬೆಳೆಯಲಾಗುತ್ತಿರುವ ಹೊಗೇಸೊಪ್ಪಿನ ಧಾರಣೆಗೂ ಮತ್ತು ಗುಜರಾತು ಮತ್ತು ನಿಪ್ಪಾಣಿ ಪ್ರದೇಶದಲ್ಲಿ ಬೆಳೆಯುವ ಹೊಗೆಸೊಪ್ಪಿನ ಧಾರಣೆಗೂ ಬಹಳ ಏರುಪೇರಿದೆ. ನಮ್ಮ ಹೊಗೆಸೊಪ್ಪಿಗಿಂತ ಆ ಹೊಗೆ ಸೊಪ್ಪಿಗೆ ಬೆಲೆ ಜಾಸ್ತಿ. ಇದಕ್ಕಾಗಿ ಈ ದಿವಸ ನಮ್ಮ ಹೊಗೆಸೊಪ್ಪೇ ಮದ್ರಾಸ್ ಇತ್ಯಾದಿ ಕಡೆಗಳಿಗೆಲ್ಲಾ ಬೀಡಿಸುತ್ತಲು ಹೋಗುತ್ತಿದೆ. ಇನ್ನು ಕೆಲವರು ಅಲ್ಲಿ ಬೆಳೆಯುವಂಥ ಹೊಗೆಸೊಪ್ಪಿನಿಂದಲೇ ಬೀಡಿಗಳನ್ನು ತಯಾರಿಸುತ್ತಿದ್ದಾರೆ. ಆದರೆ ಈಗ ಈ ಬೀಡಿಗಳನ್ನು ತಯಾರುಮಾಡಲು ಅತ್ಯಗತ್ಯವಾಗಿ ಬೇಕಾಗಿರುವಂಥ ತೂಬರೆ ಎಲೆಗಳು ಮದ್ರಾಸಿಗೂ ಮತ್ತು ನಮ್ಮ ಮೈಸೂರಿಗೂ ಹೈದರಾಬಾದಿನಿಂದ ಬರಬೇಕಾಗಿದೆ. Just as paper is required to manufacture cigarette, the leaves of a particular tree called "thupra" tree are required to manufacture beedis. ಈ ದಿವಸ ಈ ತೂಬರೆ ಎಲೆಗಳ ಗಿಡಗಳು ನಮ್ಮ ದೇಶದ ಕಾಡಿನಲ್ಲಿ ಅಷ್ಟಿಷ್ಟು ಬೆಳೆಯಬಹುದು. ಈ ಗಿಡಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ನಮ್ಮ ಸರ್ಕಾರದವರು ಯಾವ ಪ್ರಯತ್ನಗಳನ್ನೂ ಮಾಡುವುದಿಲ್ಲ. ಇಷ್ಟೇ ಅಲ್ಲದೆ ನಮ್ಮ ಮೈಸೂರಿನಲ್ಲಿ ಬೀಡಿ ಸುತ್ತಲು ಇರುವಂಥ ದೊಡ್ಡ ದೊಡ್ಡ ಕಾರ್ಖಾನೆಗಳೂ ಕೂಡ ಬಹಳ ವಿರಳ. ಅಂಥ ದೊಡ್ಡ ಕಾರ್ಖಾನೆಗಳು ಮೂರು ನಾಲ್ಕು ಇದ್ದರೆ ಹೆಚ್ಚಾಯಿತು. ನಮ್ಮ ದೇಶದಲ್ಲಿ ಇದೊಂದು ಗೃಹಕೈಗಾರಿಕೆಯಂತೆ ನಡೆಯುತ್ತಿದೆ. ನಮ್ಮಲ್ಲಿ ಈಗ ಈ ಬೀಡಿಸುತ್ತಲು ಒಂದೊಂದು ಅಂಗಡಿಯವರು ಕೇವಲ 10-20 ಮಣ ಹೊಗೆಸೊಪ್ಪನ್ನು ಮಾತ್ರ ಕೊಂಡುಕೊಳ್ಳುತ್ತಿದ್ದಾರೆ. ಇಲ್ಲಿ ತಯಾರಿಸುತ್ತಿರುವುದೆಲ್ಲಾ ತೀರ ಕಡಮೆ ದರ್ಜೆಯ ಬೀಡಿಗಳು, ಇವುಗಳ ಮಾರಾಟ ಸಹ ಎಲ್ಲೆಲ್ಲಿ ಈ ಬೀಡಿಗಳು ಈಗ ಚಲಾವಣೆಗೆ ಬಂದಿರುತ್ತವೆಯೋ ಅಲ್ಲೇ ಇವುಗಳಿಗೆ ಗಿರಾಕಿ ಇರುವುದು. ಬೇರೆಕಡೆಗೆ ಇವುಗಳನ್ನು ತೆಗೆದುಕೊಂಡು ಹೋದರೆ ಯಾರೂ ಇವನ್ನು ಕೊಂಡುಕೊಳ್ಳುವುದಿಲ್ಲ. ಈಗ ತಾನೆ ಮಾನ್ಯ ಮಂತ್ರಿಗಳು ಮದ್ರಾಸಿನಲ್ಲಿ ಮೂರು ಕಾಸು ತೆರಿಗೆ ಈ ಬೀಡಿಗಳ ಮೇಲೆ ಹಾಕಲಾಗಿತ್ತು, ಅದನ್ನೀಗ ಆರುಕಾಸುಗಳಿಗೆ ಹೆಚ್ಚಿಸಿದ್ದಾರೆ ಎಂದು ಹೇಳಿದರು.

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹೇಳಲಿಲ್ಲ. ಮದ್ರಾಸ್ ಸರ್ಕಾರದವರು ಈಗತಾನೆ ಹೊಸದಾಗಿ ಮದ್ರಾಸಿನಲ್ಲಿ ಈ ಬೀಡಿಗಳಮೇಲೆ ಆರುಕಾಸು ತೆರಿಗೆ ಹಾಕಲು ಶಾಸನಸಭೆಯವರಿಂದ ಅಂಗೀಕಾರ ಪಡೆದಿದ್ದಾರೆ ಎಂದು ಹೇಳಿದೆ.

ಶ್ರೀ ಡಿ. ದೇವರಾಜ ಅರಸ್.—ಹಾಗಿದ್ದರೆ ಅಲ್ಲಿ ಹಾಗೆ ಆರುಕಾಸು ತೆರಿಗೆ ಹಾಕಿದ್ದರೆ ತಾವೂ ಸಹ ಅದೇರೀತಿ ಇಲ್ಲಿಯೂ ಆರುಕಾಸು ತೆರಿಗೆಯನ್ನೇ ಹಾಕಬೇಕೆಂದು ತಾವೂ ಸಹ ತಿದ್ದುಪಡಿಯನ್ನು ತರಬಹುದಾಗಿತ್ತಲ್ಲ? ಈಗ ತಾವೇಕೆ ಮೂರು ಕಾಸುಗಳೆಂದು ಹೇಳಿದ್ದೀರಿ!

Sri Kadidal MANJAPPA.—The only point is whether the State can take some revenue.

Sri J. MOHAMED IMAM.—So you want money?

Sri Kadidal MANJAPPA.—That is the primary consideration.

ಶ್ರೀ ದೇವರಾಜ ಅರಸ್.—ಹಾಗೆ ಮಾನ್ಯಸಚಿವರು ಕೇವಲ ಸಂಸ್ಥಾನಕ್ಕೆ ದುಡ್ಡಿನ ವರಮಾನ ಒಂದು ಬಂದರೆ ಸಾಕು, ಯಾರು ಸತ್ತರೇನು ಎಂದು ಹೇಳುವುದಾದರೆ ಅದಕ್ಕೆ. . . .

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ಯಾರಾದರೂ ಸಾಯಬೇಕೆಂಬ ಉದ್ದೇಶದಿಂದರೇನೂ ತಂದಿಲ್ಲ. ಮದ್ರಾಸಿನಲ್ಲಿ ಈಗ ಆರುಕಾಸು ತೆರಿಗೆಯನ್ನು ಹಾಕಿದ್ದಾರೆ. ಇಲ್ಲಿ ಇಲ್ಲಿಯತನಕ ಒಂದುಕಾಸು ತೆರಿಗೆ

(ಶ್ರೀ ಕಡಿದಾಳ್ ಮಂಜಪ್ಪ.)

ಮಾತ್ರ ಹಾಕಲಾಗಿತ್ತು. ಅದನ್ನೀಗ ಮೂರುಕಾಸುಗಳಿಗೆ ಹೆಚ್ಚಿಸಿದರೆ ಸಾಕೆಂದು ಹೇಳಿದ್ದೇವೆ. ಅಷ್ಟೇ ಹೊರತು ಮತ್ತೇನೂ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಈ ಹಿಂದೆ ತಾವು ಇಲ್ಲಿ ಈ ಕೈಗಾರಿಕೆಯವರಿಗೆ ಮೂರುಕಾಸು ತೆರಿಗೆ ಹಾಕಿದ್ದಿರಿ. ಆಗ ಇವರಿಗೆ ಅದರಿಂದ ಬಹಳ ತೊಂದರೆಯಾಗುತ್ತದೆ, ಕೊನೆಗೆ ಅನೇಕರು ಈ ಕೈಗಾರಿಕೆಯನ್ನು ಬಿಟ್ಟುಬಿಡಬೇಕಾಗುತ್ತದೆ ಎಂದು ಈ ಮಾನ್ಯ ಸಭೆಯಲ್ಲಿ ಬಹಳವಾಗಿ ವಾದಮಾಡಿದ್ದರಿಂದ ತಾವು ಹಿಂದೆ ಈ ತೆರಿಗೆಯನ್ನು ಮೂರುಕಾಸಿನಿಂದ ಒಂದುಕಾಸಿಗೆ ಇಳಿಸಿದ್ದಿರಿ. ಈಗ ಮತ್ತೆ ತಾವು ಮದ್ರಾಸಿನಲ್ಲಿ ಆರುಕಾಸನ್ನು ಹಾಕಿರುವುದರಿಂದ ಇಲ್ಲಿಯ ತೆರಿಗೆಯನ್ನು ಮೂರುಕಾಸಿಗೆ ಹೆಚ್ಚಿಸಿದ್ದೇವೆಂದು ಹೇಳುತ್ತಿರುವುದರಿಂದ ಈಗ ಮತ್ತೆ ಅವರಿಗೆ ತೊಂದರೆಯನ್ನು ತಾವು ತಿಳಿದೂ ತಿಳಿದೂ ಕೊಟ್ಟಹಾಗೆ ಆಗುತ್ತದೆ ಎಂದು ನಾವು ಹೇಳುತ್ತಿದ್ದೇವೆ. ತಾವು ಈ ಹಿಂದೆ ಈ ತೆರಿಗೆಯನ್ನು ಹಾಕಲು ಕಾರಣವೇನಿತ್ತು ಎಂಬ ಬಗ್ಗೆ ತಿಳಿಸುತ್ತ ಇಲ್ಲಿಯ ಸರಕು ಅಲ್ಲಿಗೆ ಹೋಗುವುದು ತಪ್ಪುತ್ತದೆ—ಅಲ್ಲಿಂದ ಮಾಲು ಇಲ್ಲಿಗೆ ಬರುವುದು ತಪ್ಪುತ್ತದೆ, ಅದಕ್ಕಾಗಿ ಈ ತೆರಿಗೆಯನ್ನು ಈಗ ಹಾಕಲೇಬೇಕಾಯಿತು ಎಂದು ಹೇಳಿದ ಜವಾಬು ಸರಿಯಾದದ್ದಲ್ಲ. ನಮಗೆ ದುಡ್ಡು ಬೇಕಾಗಿತ್ತು ಅದಕ್ಕಾಗಿ ನಾವೀಗ ಈ ತಿದ್ದುಪಡಿಯನ್ನು ತಂದಿದ್ದೇವೆ, ಎಂದು ಹೇಳಿದ್ದರೆ ನಾವು ಆಗ ಒಂದುವೇಳೆ ಒಪ್ಪಿದ್ದರೂ ಒಪ್ಪಿಕೊಳ್ಳಬಹುದಾಗಿತ್ತು. ಆದರೆ ತಾವು ಈ ತೆರಿಗೆ ಹಾಕಲು ಹೇಳಿರತಕ್ಕಂಥ ಕಾರಣಗಳಿಗೂ ಈಗ ಹೇಳುತ್ತಿರುವಂಥ ಕಾರಣಕ್ಕೂ ಬಹಳ ವ್ಯತ್ಯಾಸವಿದೆ. ಇಷ್ಟೇ ಅಲ್ಲದೆ ದೇಶದಲ್ಲಿ ಹೀಗೆ ಕೇವಲ ದುಡ್ಡು ಒಂದನ್ನು ವಸೂಲ್ಮಾಡುವುದರಲ್ಲೇ ತಮ್ಮ ಜವಾಬ್ದಾರಿಯೆಲ್ಲಾ ಮುಗಿಯಲಿಲ್ಲ. ತಾವು ಯಾವಾಗ ಈ ಉದ್ಯಮಗಳಿಂದ ಹೀಗೆ ದುಡ್ಡನ್ನು ವಸೂಲ್ಮಾಡಿಕೊಳ್ಳುತ್ತೀರೋ ಆಗ ಈ ಉದ್ಯಮಗಳ ಅಭಿವೃದ್ಧಿಯ ಜವಾಬ್ದಾರಿಯನ್ನು ಕೂಡ ವಹಿಸಲೇಬೇಕಾಗುತ್ತದೆ. ಇದು ತಮ್ಮ ಕರ್ತವ್ಯ. ಈ ಉದ್ಯಮಗಳನ್ನು ಅಭಿವೃದ್ಧಿಗೆ ತರಬೇಕಾಗಿರುವುದು ತಮ್ಮ ದೃಷ್ಟಿಯಲ್ಲಿದ್ದರೆ ತಾವು ಇವುಗಳ ವಿಚಾರದಲ್ಲಿ ಬಹಳ ಸಹಾನುಭೂತಿಯಿಂದ ವರ್ತಿಸಬೇಕಾಗುತ್ತದೆ. ಈ ವಿಚಾರಗಳನ್ನೆಲ್ಲಾ ಸರ್ಕಾರ ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲನೆ ಮಾಡುವದು ಒಳ್ಳೆಯದು. ಈಗ ಯಾರು ಯಾರು ಒಂದುಕಾಸು ತೆರಿಗೆ ಕೊಡುತ್ತಿದ್ದಾರೋ ಅಂಥವರಿಂದ ಮಾತ, ಮೂರುಕಾಸು ತೆರಿಗೆಯನ್ನು ವಸೂಲ್ಮಾಡಬೇಕೆಂದು ತಿಳಿಸಲಾಗಿದೆ ಎಂದು ಹೇಳಿದ್ದೀರಿ. ಈ ಹಿಂದೆಯೇ ಬಹಳ ತೊಂದರೆಯಾಗುತ್ತದೆ ಎಂದು ಹೇಳಲಾಗಿತ್ತು. ಇದು ಒಂದು ಗೃಹಕೈಗಾರಿಕೆಯೋಪಾದಿಯಲ್ಲಿ ನಮ್ಮ ಸೀಮೆಯಲ್ಲಿ ನಡೆದುಕೊಂಡು ಬಂದಿದೆ. ಆದ್ದರಿಂದ ಇದರಮೇಲೆ ಯಾವ ತೆರಿಗೆಯನ್ನೂ ಹಾಕಬಾರದೆಂದು ಈ ಮಾನ್ಯಸಭೆಯಲ್ಲೇ ಈ ಹಿಂದೆ ತೀರ್ಮಾನವಾಗಿತ್ತು. ಆಗ ಈ ಉದ್ಯಮಕ್ಕೆ ಒಂದು ರಿಯಾಯಿತಿಯನ್ನು ಕೊಡತಕ್ಕದ್ದು ತೀರ ಆವಶ್ಯಕ ಎಂದು ಕಂಡುಬಂದುದರಿಂದ ಇದರ ಮೇಲೆ ಹಾಕಲಾಗಿದ್ದಂಥ ತೆರಿಗೆಯನ್ನು ಒಂದು ಕಾಸಿಗೆ ಇಳಿಸಿದ್ದಾಯಿತು. ಪುನಃ ತಾವೀಗ ಈ ತಿದ್ದುಪಡಿಯನ್ನು ತಂದು ಇದನ್ನು ಸಭೆಯ ಮುಂದೆ ಮಂಡಿಸುವಾಗ, ಇದು ಸ್ಮಗಲ್ ಆಗಿ ಹೋಗುತ್ತದೆ, ಅದನ್ನು ತಡೆಗಟ್ಟಬೇಕೆಂಬ ಉದ್ದೇಶದಿಂದ ಈಗ ಈ ತಿದ್ದುಪಡಿಯನ್ನು ತರಲಾಗಿದೆ ಎಂದು ತಾವು ಏನೊಂದು ಕಾರಣವನ್ನು ಹೇಳಿದಿರೋ ಅದರ ಪ್ರಕಾರ ತಾವೀಗ ಈ ತೆರಿಗೆಯನ್ನು ಮೂರುಕಾಸಿಗೆ ಹೆಚ್ಚಿಸಿದ್ದರಿಂದ ಆ unauthorised movementನ್ನು ತಪ್ಪಿಸಿದಂತೆ ಆಗಲಿಲ್ಲ. ಈಗೇನೂ ಆರೀತಿ ಇದರ unauthorised movement ಜಾಸ್ತಿಯಾಗಿಲ್ಲ. ಹಾಗೆ ಜಾಸ್ತಿಯಾಗತಕ್ಕಂಥ ಸಂಭವಗಳು ಕಂಡುಬಂದಾಗ ಬೇಕಾದರೆ ಇದನ್ನು ನಾವು ಆಲೋಚನೆ ಮಾಡಬಹುದು. ಈಗ ಸದ್ಯಕ್ಕೆ ಇದು ಬೇಕಾಗಿಲ್ಲ. ಅದುದರಿಂದ ತಾವು ಇದನ್ನು ಪುನಃ ಪರಿಶೀಲನೆ ಮಾಡತಕ್ಕದ್ದು ಅಗತ್ಯವೆಂದು ಹೇಳುತ್ತೇನೆ.

ಇನ್ನು ಈ ಬೀಡಿಗಳ ಮಾರಾಟ ತೆಗೆದುಕೊಂಡರೆ ಅಕ್ಕಿ, ರಾಗಿ ಇತ್ಯಾದಿ ಧಾನ್ಯಗಳಂತೆ ಇವುಗಳನ್ನು ಎಲ್ಲಿ ಬೇಕಾದರೂ ಮಾರಾಟಮಾಡಬೇಕೆಂದರೆ ಅದು ಸಾಧ್ಯವಾಗುವುದಿಲ್ಲ. ಕೆಲಕೆಲವು ಬೀಡಿಗಳನ್ನು ಇಂಥಿಂಥ ಮಾರುವ ಕಟ್ಟೆಗೆ ತೆಗೆದುಕೊಂಡು ಹೋದರೇನೆ ಅವುಗಳನ್ನು ಮಾರಾಟಮಾಡಲು ಸಾಧ್ಯವಿದೆ ಇಲ್ಲದಿದ್ದರೆ ಇಲ್ಲ ಎನ್ನುವುದು ನಿರ್ಧರವಾಗಿದೆ. ಈಗ ಉದಾಹರಣೆಗೆ ಹೇಳುವುದಾದರೆ ಈ 555 ಮತ್ತು ಪ್ಲೇಯರ್ಸ್ ಎಂಬ ಸಿಗರೇಟುಗಳನ್ನೇ ಕೆಲವರು ಹೇಗೆ ಹೆಚ್ಚುಹೆಚ್ಚಾಗಿ ಉಪಯೋಗಿಸುತ್ತಿದ್ದಾರೋ ಹಾಗೇ ಕೆಲಕೆಲವುಕಡೆ ಕೆಲಕೆಲವು ಬೀಡಿಗಳು ಮಾತ್ರ ಪ್ರಾಶಸ್ತ್ಯಕ್ಕೆ ಬಂದಿರುತ್ತವೆ. ಅಂಥ ಬೀಡಿಗಳನ್ನು ಜನರು ಸೇದುತ್ತಾರೆಯೆ ಹೊರತು ಬೇರೆ ಬೀಡಿಗಳನ್ನು ಅವರು ಉಪಯೋಗಿಸುವುದಿಲ್ಲ. ಆದುದರಿಂದ ಕೇವಲ ಪ್ರಾಶಸ್ತ್ಯಕ್ಕೆ ಬಂದಿರತಕ್ಕಂಥ ಬೀಡಿಗಳು ಮಾತ್ರ ಹೊರಗಡೆ ಹೋಗಲು ಸಾಧ್ಯವಿದೆಯೇ ಹೊರತು ಎಲ್ಲಾ ಬೀಡಿಗಳೂ ಸಿಕ್ಕಿದಂತೆ ಖರ್ಚಾಗಲು ಅವಕಾಶವೇಇಲ್ಲ. ಈಗ ಉದಾಹರಣೆಗೆ ಹೇಳುವುದಾದರೆ, ಮಂಗಳೂರು ಗಣೇಶಮಾರ್ಕಿನ ಬೀಡಿಗಳು ಮೈಸೂರಿಗೆ ಬರುತ್ತವೆ. ಅದು ಆ ಬೀಡಿಯ ಪ್ರಾಶಸ್ತ್ಯದಿಂದಲೇ ಹೊರತು ಮತ್ತೊಂದು ಕಾರಣವಿಲ್ಲ. ಆದರೆ ಅದೇ ರೀತಿ ನಮ್ಮ ಬೀಡಿಗಳು ಮದ್ರಾಸಿಗೆ ಹೋಗಲು ಸಾಧ್ಯವಿಲ್ಲ. ಯಾವಾಗ ಆ ಬೀಡಿಗಳಿಗೆ ಹೀಗೆ ತೆರಿಗೆ ಹೆಚ್ಚಾಗಿ ಬೆಲೆ ಜಾಸ್ತಿಯಾಗುತ್ತದೋ ಆಗ ಜನರು ತಮ್ಮ ಸ್ಥಳದ ಬೀಡಿಗಳನ್ನೇ ಸೇದಲು ಮನಸ್ಸು ಮಾಡುತ್ತಾರೆ. ಹೆಚ್ಚಿಗೆ ದುಡ್ಡು ಕೊಟ್ಟು ಆ ಬೀಡಿಗಳನ್ನು ಯಾರೂ ಸೇದುವುದಕ್ಕೆ ಹೋಗುವುದಿಲ್ಲ. ಆದರೆ ಆ ಒಂದೇ ರಖಮಿನ ಬೀಡಿಗಳನ್ನು ಸೇದುವುದಕ್ಕೆ ಯಾರು ಅಭ್ಯಾಸವಿಟ್ಟುಕೊಂಡಿರುತ್ತಾರೋ ಅಂಥವರು ಮಾತ್ರ ಅವುಗಳನ್ನು ಕೊಂಡುಕೊಳ್ಳುತ್ತಾರೆ. ಈ ಕಾರಣಗಳಿಂದ ಇತರ ಧಾನ್ಯಗಳನ್ನು ನಾವು ಎಲ್ಲಿ ಬೇಕಾದರೂ ಮಾರಾಟ ಮಾಡುವಂತೆ ಈ ಬೀಡಿಗಳನ್ನು ಮಾರಾಟಮಾಡಲು ಸಾಧ್ಯವಿಲ್ಲ. ಈಗ ಮಾನ್ಯ ಸಚಿವರು ಹೇಳಿರುವಂತೆ ಮದ್ರಾಸಿನಲ್ಲಿ ಮೂರುಕಾಸಿನಿಂದ ಆರುಕಾಸಿಗೆ ತೆರಿಗೆಯನ್ನು ಅವರು ಹೆಚ್ಚಿಸಿದ್ದಾರೆಂದು ಇಟ್ಟುಕೊಂಡರೆ. . .

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹೇಳಲಿಲ್ಲ. ಇಲ್ಲಿಯವರೆಗೂ ಮದ್ರಾಸಿನಲ್ಲಿ ಈ ಬೀಡಿಗಳಮೇಲೆ ತೆರಿಗೆಯನ್ನು ಎಗ್ಝೆಂಪ್ಟ್ ಮಾಡಿತ್ತು. ಈಗ ಅಲ್ಲಿ ಆರುಕಾಸು ತೆರಿಗೆ ಹಾಕಿದ್ದಾರೆ. ಆದರೆ ನಾವೀಗ ಇಲ್ಲಿ ಅದನ್ನು ಒಂದುಕಾಸಿನಿಂದ ಮೂರುಕಾಸಿಗೆ ಹೆಚ್ಚಿಸಿದ್ದೇವೆ ಎಂದು ಮಾತ್ರ ಹೇಳಿದೆ.

ಶ್ರೀ ಡಿ. ದೇವರಾಜ ಅರಸ್.—ಆಗಲಿ. ಹೀಗೆ ತಾವು ತೆರಿಗೆಯನ್ನು ಹೆಚ್ಚಿಸಿದ್ದರಿಂದ ಈ ಅನ್‌ಆಥರೈಸ್ಡ್ ಮೂವ್‌ಮೆಂಟನ್ನು ಹೇಗೆ ತಡೆಗಟ್ಟಲು ಸಾಧ್ಯವಾಗುತ್ತದೆ? ತಮ್ಮ ಉದ್ದೇಶವನ್ನು ತಾವು ಇದರಿಂದ ಹೇಗೆ ಸಾಧನೆಮಾಡಿಕೊಳ್ಳುತ್ತೀರಿ? ಈ ಅನ್‌ಆಥರೈಸ್ಡ್

ಮೂವ್‌ಮೆಂಟನ್ನು ತಪ್ಪಿಸಲು ಮದ್ರಾಸಿನಲ್ಲಿ ಹಾಗೆ ಅವರು ಈ ತೆರಿಗೆಯನ್ನು ವಿಧಿಸಿಲ್ಲ. ಆದ್ದರಿಂದ ತಾವು ಇಲ್ಲಿ ಈ ಮೂರುಕಾಸು ತೆರಿಗೆಯನ್ನು ಹಾಕಿ ಜನರಿಗೇಕೆ ತೊಂದರೆಕೊಡುತ್ತೀರಿ? ಈ ತೆರಿಗೆಯನ್ನು ತಾವು ಹೆಚ್ಚಿಸಲು ಹೇಳಿರತಕ್ಕಂಥ ಕಾರಣ ಸರಿಯಾದದ್ದಲ್ಲ ಅನ್ನತಕ್ಕದ್ದನ್ನು ತಾವೀಗ ಒಪ್ಪಲೇಬೇಕಾಗಿದೆ. ತಮಗೆ ಉತ್ಪತ್ತಿಬರಬೇಕೆಂಬುದೇನೋ ಸರಿ. ಆದರೆ ಈ ಬೀಡಿಗಳನ್ನು ಸುತ್ತಲು ನಮ್ಮ ಮೈಸೂರಿನಲ್ಲಿ ಅಂಥ ದೊಡ್ಡದೊಡ್ಡ ಕಂಪೆನಿಗಳಾವುವೂ ಇರುವುದಿಲ್ಲ. ಸಿಗರೇಟ್ ಇತ್ಯಾದಿಗಳನ್ನು ಅಧಿಕಪ್ರಮಾಣದಲ್ಲಿ ತಯಾರಿಸುತ್ತಿರುವಂತೆ ಇಲ್ಲಿ ಯಾರೂ ಈ ಬೀಡಿಗಳನ್ನು ತಯಾರು ಮಾಡುತ್ತಿಲ್ಲ. ಇಲ್ಲಿರತಕ್ಕದ್ದೆಲ್ಲಾ ಮೂರು ನಾಲ್ಕು ದೊಡ್ಡ ಫ್ಯಾಕ್ಟರಿಗಳು, ಮಾತ್ರ. ಈ ದಿವಸ ಈ ಬೀಡಿಕೈಗಾರಿಕೆಯು ನಮ್ಮ ಸಂಸ್ಥಾನದಲ್ಲಿ ಒಂದು ಗೃಹಕೈಕಾರಿಕೆಯೋಪಾದಿಯಲ್ಲಿದ್ದು ಅನೇಕ ಚಿಕ್ಕಪುಟ್ಟಸಂಸಾರಗಳಿಗೆ ಜೀವನಾಧಾರಕ್ಕೆ ಇದೊಂದು ಮಾರ್ಗವಾಗಿರುತ್ತದೆ. ಆದುದರಿಂದ ಈ ಹಿಂದೆ ಇದ್ದಂತೆ ಆ ಮಾಮೂಲು ಒಂದು ಕಾಸು ತೆರಿಗೆಯೇನಿತ್ತೋ ಅದನ್ನೇ ಈಗಲೂ ಇಟ್ಟುಕೊಂಡರೆ ಒಳ್ಳೆಯದಾಗುತ್ತದೆಂದು ನಾನು ಸಲಹೆ ಮಾಡುತ್ತೇನೆ. ಹಾಗಾದರೆ ಈ ಬೀಡಿಗಳು ಇಲ್ಲಿಂದ ತಾವು ಹೇಳಿದಂತೆ ಸ್ಮಗಲ್ ಆಗುವುದಕ್ಕೆ ಅವಕಾಶವಿಲ್ಲ: ಮದ್ರಾಸಿನಲ್ಲಿ ತಯಾರಾಗತಕ್ಕಂಥ ಬೀಡಿಗಳು ಕೂಡ ಹಾಗೆ ಇಲ್ಲಿಗೆ ಬರಲು ಅವಕಾಶವಿಲ್ಲ. ಈಗ ಮದ್ರಾಸಿನಲ್ಲಿ ಅವರು ತೆರಿಗೆಯನ್ನು ಜಾಸ್ತಿಮಾಡಿದ್ದಾರೆಂದು ಇಲ್ಲಿಯೂ ಜಾಸ್ತಿಮಾಡಬೇಕೆಂದರೆ ಈ ಕೈಗಾರಿಕೆಗೆ ತುಂಬ ಧಕ್ಕೆಯನ್ನುಂಟುಮಾಡಿದ ಹಾಗಾಗುತ್ತದೆ. ಮದ್ರಾಸಿನಿಂದ ಇಲ್ಲಿಗೆ ಮಾರಾಟಮಾಡಲು ಬೀಡಿಗಳು ಬರುತ್ತವೆ ಎಂಬ ಒಂದು ಊಹೆಯಮೇಲೆ ಈ ತೆರಿಗೆಯನ್ನು ಹೀಗೆ ಹೆಚ್ಚಿಸಲು ತಮಗೆ ಅಂಥ ಆಧಾರಗಳು ಯಾವುವೂ ಇರುವುದಿಲ್ಲ. ತಾವು ಈಗ ನಮ್ಮ ದೇಶದಲ್ಲಿ ಈ ಬೀಡಿಗೆ ಟ್ಯಾಕ್ಸನ್ನು ಹೆಚ್ಚಿಸದೆ ಕೈಬಿಟ್ಟರೆ ನಮ್ಮ ದೇಶದ ಬೀಡಿ ಕೈಗಾರಿಕೆಗೆ ತಾವು ಒಂದು ಹೆಚ್ಚಿನ ಪ್ರೋತ್ಸಾಹ ನೀಡಿದಂತಾಗುವದು ಮತ್ತು ಈ ಬೀಡಿಗಳು ಹೊರಗಡೆ ಹೋದರೆ ಅದರಿಂದ ತಮಗೆ ಇನ್ನೂ ಹೆಚ್ಚಿನ ಆದಾಯ ಬರುತ್ತದೆ. ನಮ್ಮ ಸ್ಟೇಟಿನಲ್ಲಿ ಬೀಡಿಗಳನ್ನು ಸುತ್ತಲು ಹದಮಾಡದೆ ಹೊಗೇಸೊಪ್ಪನ್ನು ಬಳಸುತ್ತಾರೆ. ಮದ್ರಾಸ್ ಇತ್ಯಾದಿ ಕಡೆಗಳಿಗೆಲ್ಲಾ ಹದಮಾಡಿದ ಹೊಗೆಸೊಪ್ಪು ಬೇಕಾಗಿದೆ.

2 P.M.

ನಮ್ಮ ದೇಶದಲ್ಲಿ ಲಕ್ಷಾಂತರ ಜನರು ಹೊಗೇಸೊಪ್ಪು ಬೆಳೆಯುತ್ತಾರೆ. ತಮಗೆ ಗೊತ್ತಿದ್ದಹಾಗೆ ಎರಡು ತರಹ ಹೊಗೇಸೊಪ್ಪನ್ನು ಬೆಳೆಯುತ್ತಾರೆ. ಲೋಕಪ್ರಖ್ಯಾತಿಯಾದ ವರ್ಜಿನಿಯಾ ಹೊಗೇಸೊಪ್ಪನ್ನು ನಮ್ಮ ದೇಶದಲ್ಲಿ ಬೆಳೆಯುತ್ತಾರೆ. ವರ್ಜಿನಿಯಾ ಹೊಗೇಸೊಪ್ಪನ್ನು ಸಿಗರೇಟಿಗೆ ಮಾತ್ರ ಉಪಯೋಗಿಸುತ್ತಾರೆ. ಇನ್ನೊಂದನ್ನು ತಿನ್ನುವುದಕ್ಕೋಸ್ಕರವೂ ಮತ್ತು ಬೀಡಿ ಮಾಡುವುದಕ್ಕೂ ಉಪಯೋಗಿಸುತ್ತಾರೆ. ಬೀಡಿಗೆ ಹಾಕತಕ್ಕಂಥ ಹೊಗೇಸೊಪ್ಪಿನಿಂದ ನಶ್ಯವನ್ನು ತಯಾರುಮಾಡುತ್ತಾರೆ. ಹೊಗೇಸೊಪ್ಪಿನಲ್ಲಿ ಬೇರೆ ಬೇರೆ methods of curing ಇದೆ. ಒಂದುತರಹ curing ಮಾಡಿದರೆ ಆ ಹೊಗೇಸೊಪ್ಪನ್ನು ನಶ್ಯ ತಯಾರಿಸುವುದಕ್ಕೆ ಉಪಯೋಗಿಸಬಹುದು, ಅಥವಾ ಬೀಡಿ ತಯಾರುಮಾಡುವುದಕ್ಕೆ ಉಪಯೋಗಿಸಬಹುದು. ಹೊಗೇ ಸೊಪ್ಪಿನಿಂದ ಒಂದು ಭಾಗದ ದುಡ್ಡು ನಮ್ಮ ದೇಶದ ರೈತರಿಗೆ ಬರುತ್ತಾ ಇದ್ದರೆ ಇನ್ನು ಹೆಚ್ಚಿಗೆ ಭಾಗದ ದುಡ್ಡು ಹೊರಗೆ ಬೀಡಿ ತಯಾರುಮಾಡುವವರಿಗೆ ಹೋಗುತ್ತದೆ. ಕಾಲಕ್ರಮೇಣ ಇದನ್ನು ತಪ್ಪಿಸಬೇಕಾದರೆ ನಮ್ಮ ದೇಶದಲ್ಲಿ ಬೆಳೆಯುವ ಬೀಡಿ ಸೊಪ್ಪನ್ನು ಇಲ್ಲಿ ಉಪಯೋಗಿಸಿಕೊಂಡು ಬೀಡಿಯನ್ನು ತಯಾರುಮಾಡುವುದಕ್ಕೆ ಉತ್ತೇಜನ ಕೊಡಬೇಕಾದುದು ಸರ್ಕಾರದ ಕರ್ತವ್ಯ. ಹೈದರಾಬಾದ್ ದೇಶದಿಂದ ಎಲೆಯನ್ನು ಇಲ್ಲಿ ಬೀಡಿ ತಯಾರುಮಾಡುವವರು ತರಿಸುತ್ತಿದ್ದಾರೆ. ಅದು ತಪ್ಪುವಂತೆ ಮಾಡಿದರೆ ಬೀಡಿಯನ್ನು ಕಡಿಮೆ ದರದಲ್ಲಿ ತಯಾರುಮಾಡಿ ಮಾರಾಟಮಾಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಸರ್ಕಾರದವರು ನಮ್ಮ ಕಾಡುಗಳಲ್ಲಿ ತೂಬರೆ ಗಿಡಗಳನ್ನು ಬೆಳೆಯುವುದಕ್ಕೆ ಹೆಚ್ಚು ಪ್ರಯತ್ನ ಮಾಡಬೇಕು ಮತ್ತು ಅದಕ್ಕೆ ಉತ್ತೇಜನ ಕೊಡಬೇಕು. ಹಾಗೆ ಮಾಡಿದರೆ ಈ ಬೀಡಿಯಮೇಲೆ ಮೂರು ಕಾಸು ತೆರಿಗೆ ಹಾಕಿ ಅದರಿಂದ 70 ಸಾವಿರ ರೂಪಾಯಿಗಳ ಉತ್ಪತ್ತಿ ಬರುವುದಕ್ಕೆ ಬದಲಾಗಿ 10 ಲಕ್ಷ ರೂಪಾಯಿಗಳವರೆಗೂ ಉತ್ಪತ್ತಿ ಈ ತೂಬರೆ ಗಿಡಗಳನ್ನು ನಮ್ಮಲ್ಲಿ ಬೆಳೆಸುವುದರಿಂದ ಬರುತ್ತದೆ ಎಂದು ಸಲಹೆ ಮಾಡುತ್ತೇನೆ. ಆದ್ದರಿಂದ ಮೂರು ಕಾಸನ್ನು ತೆಗೆದು ಒಂದು ಕಾಸು ಇಡುವುದು ಒಳ್ಳೆಯದೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

*Sri S. SRINIVASA IYENGAR (T.-Narasipur).—Sir, I oppose this Bill. The contention of the Government as contained in the Statement of Objects and Reasons are not borne out by the clauses of the Bill. I will just read what the Government have stated in Statement of Objects and Reasons. They say: "It is therefore desirable that the rates of tax in Mysore also should be on a par with those in Madras for preventing the unauthorised movement of these goods into Madras to the detriment of honest dealers, and for augmenting the revenues of the State." The clauses of the Bill provide for a levy of sales-tax of three pies in the rupee while in Madras it is six pies in the rupee and therefore the rates of levy are not on a par.

Sri Kadidal MANJAPPA.—The Hon'ble Member is confining himself to beedis.

Sri S. SRINIVASA IYENGAR.—To that extent, I am glad that the Government have admitted that the Bill is not in order. Secondly, Sri Mascarenhas was informing me that by raising this levy to that of Madras, the industry in Mysore State would thrive. Otherwise there would be unfair competition. Since there is a difference in rate, that competition still exists. Sir, the third thing is, as he rightly puts it, prior to April 1955, sales-tax was being levied at three pies in the rupee. It is a fact.

(SRI S. SRINIVASA IYENGAR.)

When the amendment was introduced, an amendment to amend the sales-tax, I was one of those who fought for the abolition of sales-tax on beedis. While the list was being compiled for schedule III, we insisted that beedi should be found there on the ground that beedi was exempted in Madras. Government then said that they were levying a charge of one pie in the rupee and that they may be permitted to do so. Now we find, just because we gave them an opportunity, they are overburdening that industry which is run like a cottage industry. If the sales-tax is enhanced, if a particular trader is giving Rs. 50 today, he will have to pay Rs. 150. Even in enhancement there must be reason. It should not be three times. I think it will hit hard the cottage industry in rural parts. They said—"We exempted arecanut because we considered it to be a poor man's food". . . .

Sri Kadidal MANJAPPA.—It is not a correct argument. It was because we were deriving only a few thousands of rupees. Moreover, merchants were put to large inconveniences, and most of it was being exported outside Mysore.

Sri S. SRINIVASA IYENGAR.—If the contention is that they exempted arecanut because Government would get only a few thousands and therefore it was not worth the trouble, I would put it this way. Just now, Government said that they would be getting 1½ lakhs more than what they get under the new Act. Without the enhancement the normal income is Rs. 80,000 or not more than Rs. 60,000 if one pie is levied. By the proposed enhanced levy the Government would get 1½ lakhs, *i.e.*, Rs. 80,000, more. Even then considering beedi to be a common man's pleasure, a sacrifice of Rs. 80,000 is worth it. Therefore, I submit that beedi should be completely exempted and brought under the exemption list.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಮಾನ್ಯ ಸಚಿವರು ಈ ಸಭೆಮುಂದೆ ತಂದಿರತಕ್ಕಂಥ ಮೈಸೂರು ಸೇಲ್ಸ್ ಟ್ಯಾಕ್ಸ್ Second Amendment Billನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಇದರ ಉದ್ದೇಶಗಳನ್ನು ಈಗಾಗಲೇ ಮಂತ್ರಿಗಳು ವಿವರಿಸಿದ್ದಾರೆ. ಅವುಗಳನ್ನು ನಾನು absurd ಎಂದು ಹೇಳಬೇಕಾಗಿದೆ. ಅವು ಕಾರಣಗಳೇ ಅಲ್ಲ. ಅವರು ಹೇಳಿದ ರೀತಿಯಲ್ಲಿ ಅವುಗಳನ್ನು ಕಾರಣಗಳೆಂದು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅವುಗಳಿಂದ ತದ್ವಿರುದ್ಧವಾದ ಪರಿಣಾಮವುಂಟಾಗುತ್ತದೆ. ಅವರು ಇದು honest dealersಗೆ ಅನುಕೂಲ ಮಾಡುತ್ತದೆಯೆಂದು ಹೇಳಿದ್ದಾರೆ. Dishonest dealersಗೆ ಅನುಕೂಲ ಮಾಡುತ್ತಾರೆ ಎನ್ನುವ ಮಾತಿಗೆ ಆ ಶಬ್ದವನ್ನು ಹಾಕಿದ್ದಾಗಿದೆ. Honest dealersಗೆ ರಕ್ಷಣೆ ಕೊಡುವ ಉದ್ದೇಶದಿಂದ ಈ ಬಿಲ್ಲನ್ನು ತಂದಿಲ್ಲವೆಂಬುದು ಮೇಲೆ ಎದ್ದು ಕಾಣುತ್ತದೆ. ಸರ್ಕಾರದವರಿಗೆ ಹಣ ಬೇಕು, ಆದ್ದರಿಂದ ಇದುವರೆಗೆ ಮೂರು ಕಾಸು ಕೊಡುತ್ತಿದ್ದುದನ್ನು ಈಗಲೂ ಅದೇ ರೀತಿ ತೆಗೆದುಕೊಳ್ಳುವುದು ನ್ಯಾಯ, ಒಂದು ಕಾಸಿಗೆ ತಿದ್ದುಪಡಿ ಮಾಡುವುದರಿಂದ ಸರ್ಕಾರದ ಆದಾಯವನ್ನು ಕಳೆದುಕೊಂಡಿದ್ದಾರೆಂಬುದು ಒಂದೇ ಕಾರಣವಾಗಿದೆ. ಆದ್ದರಿಂದ ಸರ್ಕಾರದವರು ಯಾವುದಾದರೂ ನೆಪ ಕೊಟ್ಟು ಮೂರು ಕಾಸು ತೆರಿಗೆಯನ್ನು ಉಳಿಸಿಕೊಳ್ಳಬೇಕು ಎನ್ನುವ ಪ್ರಯತ್ನ ಮಾಡುತ್ತಿದ್ದಾರೆ ಎಂಬುದು ನಮಗೆಲ್ಲಾ ಚೆನ್ನಾಗಿ ಗೊತ್ತಾಗುತ್ತದೆ. ಬೀಡಿಯ ವಿಷಯದಲ್ಲಿ ಸರ್ಕಾರದವರಿಗೆ ಅಷ್ಟಾಗಿ ಮಾಹಿತಿ ಇದ್ದಹಾಗೆ ಕಂಡುಬರಲಿಲ್ಲ. ಇದು ಒಂದು ದೊಡ್ಡ ಗೃಹ ಕೈಗಾರಿಕೆ. ಸಹಸ್ರಾರು ಜನರು ಈ ಬೀಡಿಯನ್ನು ಕಟ್ಟಿ ಮಾರಾಟಮಾಡಿ ಅವರ ಜೀವನವನ್ನು ಮಾಡುತ್ತಿದ್ದಾರೆ. ಇಂತಹ ಒಂದು ಕೈಗಾರಿಕೆಗೆ ಪ್ರೋತ್ಸಾಹ ಕೊಡಬೇಕಾದದ್ದು ಸರ್ಕಾರದ ಕರ್ತವ್ಯ ಮತ್ತು ಈ ಕೈಗಾರಿಕೆಗೆ ರಕ್ಷಣೆ ಕೂಡ ಕೊಡಬೇಕು. ನಾನು ಬರೀ ಸೇದುವವರ ದೃಷ್ಟಿಯಿಂದ ನೋಡುತ್ತಾ ಇಲ್ಲ. ಸೇದುವವರನ್ನು ಹೆಚ್ಚಿಗೆ ಮಾಡಬೇಕೆಂದು ಹೇಳುತ್ತಾ ಇಲ್ಲ. ಇವೊತ್ತು ಎಷ್ಟು ಜನ ಈ ಕೈಗಾರಿಕೆಯನ್ನು ಅವಲಂಬಿಸಿ ತಮ್ಮ ಜೀವನವನ್ನು ಮಾಡುತ್ತಿದ್ದಾರೋ ಅವರಿಗೆ ಒಂದು ನೆರವನ್ನು ಕೊಡಬೇಕಾದದ್ದು ಮತ್ತು ಅವರಿಗೆ ರಕ್ಷಣೆ ಕೊಡಬೇಕಾದದ್ದು, ಉತ್ತೇಜನ ಕೊಡಬೇಕಾದುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಹೊರಗಡೆ ಮದ್ರಾಸ್ ಪ್ರಾಂತದಲ್ಲಿ ಬೀಡಿಗೆ ತೆರಿಗೆಯನ್ನು ಜಾಸ್ತಿ ಮಾಡಿದ್ದಾರೆ. ಆದ್ದರಿಂದ ನಾವು ಜಾಸ್ತಿ ಮಾಡಬೇಕಾಗುತ್ತದೆ; ಇಲ್ಲದಿದ್ದರೆ ಇಲ್ಲಿಂದ ಹೊರಗಡೆ ಹೋಗುವ ಸಂದರ್ಭ ಇರುತ್ತದೆಂದು ವಾದ ಮಾಡುತ್ತಿದ್ದಾರೆ. ಆ ವಾದದಲ್ಲಿ ಯಾವ ತಿರುಳೂ ಇಲ್ಲ. ಮೈಸೂರು ಸಂಸ್ಥಾನದಿಂದ ಹೊರಗಡೆಗೆ ನನಗೆ ಗೊತ್ತಿದ್ದಹಾಗೆ ಅಷ್ಟಾಗಿ ಬೀಡಿಗಳು ಹೋಗುತ್ತಾ ಇಲ್ಲ. ಅದಕ್ಕೆ ಬದಲಾಗಿ ಹೊರ ಪ್ರಾಂತಗಳಿಂದಲೇ ನಮ್ಮ ಸಂಸ್ಥಾನಕ್ಕೆ ಬಹಳವಾಗಿ ಬೀಡಿಗಳು ಬರುತ್ತಾ ಇವೆ. ಈ ರೀತಿಯಾಗಿ ಹೊರಗಡೆಯಿಂದ ಬರತಕ್ಕ ಬೀಡಿ ಸ್ಪರ್ಧೆಯನ್ನು ಎದುರಿಸಬೇಕಾದರೆ ಈಗ ಬಹಳ ಕಷ್ಟವಾಗಿದೆ. ಮಾನ್ಯ ಸಚಿವರು ಈಗಾಗಲೇ ಹೇಳಿರುವಹಾಗೆ, ಮದ್ರಾಸ್ ಪ್ರಾಂತದಲ್ಲಿ ಕೂಲಿ ಕಡಿಮೆ ಇದೆ. ಮೈಸೂರು ಸಂಸ್ಥಾನದಲ್ಲಿ ಕೂಲಿ ಜಾಸ್ತಿ ಕೊಡಬೇಕು ಎಂಬ ಕಾರಣದಮೇಲೆ ಈ ರೀತಿ ಸ್ಪರ್ಧೆ ಇರಲು ಕಾರಣವಾಗಿದೆ. ಇದನ್ನು ಸಮಗ್ರವಾಗಿ ನೋಡಿದರೆ ಹೊರಗಡೆಯಿಂದ ತರಿಸಿಕೊಳ್ಳುವ ತಂಬಾಕಿನಮೇಲೆ ಎಕ್ಸೈಜು ಸುಂಕದ ಹೊರೆ ಈಗಾಗಲೆ ಬಹಳವಾಗಿ ಆಗಿಬಿಟ್ಟಿದೆ. ಇಷ್ಟು ಎಕ್ಸೈಜು ಸುಂಕವನ್ನು ಕಟ್ಟಿಕೊಂಡು ಹೊರಗಡೆಯಿಂದ ಬೀಡಿ ಎಲೆಗಳನ್ನು ತರಿಸಿಕೊಂಡು ತಂಬಾಕನ್ನು ಕೊಂಡುಕೊಂಡು ನಮ್ಮ ಸ್ಟೇಟ್‌ನಲ್ಲಿ ಬೀಡಿ ತಯಾರುಮಾಡಿದರೆ ಅದರಿಂದ ನಷ್ಟ ಬಹಳ ಕಮ್ಮಿ ಬರುತ್ತದೆ. ಒಂದು ಸಾವಿರ ಬೀಡಿ

ಯನ್ನು ಮಾರಿದರೂ ಮೂರು ಆಣೆ ನಷ್ಟ ಸಿಕ್ಕುವುದು ಕಷ್ಟವಾಗುತ್ತದೆ. ಬೀಡಿಯ ದರವನ್ನು ಏರಿಸುವುದಕ್ಕೆ ಸಾಧ್ಯವಿಲ್ಲ. ಇದು ತೀರ ಬಡವರು ಸೇದತಕ್ಕಂಥ ವಸ್ತುವಾಗಿದೆ. ಇಂತಹ ಕೈಗಾರಿಕೆಗೆ ಉತ್ತೇಜನ ಕೊಡುವುದಕ್ಕೆ ಅಥವಾ ರಕ್ಷಣೆ ಕೊಡುವುದಕ್ಕೆ ಬದಲಾಗಿ ಸರ್ಕಾರದವರು ಈ ರೀತಿಯಾಗಿ ಒಂದೇಸಲ ಒಂದು ಕಾಸು ಇರುವುದನ್ನು ಮೂರು ಕಾಸುಗಳಿಗೆ ಏರಿಸುತ್ತಾ ಇರುವುದು ಯಾವ ದೃಷ್ಟಿಯಿಂದಲೂ ಸೂಕ್ತವಲ್ಲ. ಈ ಮಸೂದೆಯನ್ನು ಸರ್ಕಾರದವರು ವಾಪಸ್ಸು ತೆಗೆದುಕೊಳ್ಳುವುದು ಅವರಿಗೆ ಬಹಳ ಗೌರವಯುತವಾದುದೆಂದು ಹೇಳುತ್ತೇನೆ. ಈ ತೆರಿಗೆ ಹಾಕುವುದರಿಂದ ಬೀಡಿಯ ದರ ಹೆಚ್ಚಾಗಬಹುದು. ಸಿಗರೇಟಿನ ದರಗಳನ್ನು ಮೊನ್ನೆ ಪುನಃ ಹೆಚ್ಚಿಸಿದುದರಿಂದ ಸಿಗರೇಟ್ ಕೊಂಡುಕೊಂಡು ಸೇದುವುದು ಕಷ್ಟವಾಗಿದೆ. ನಮ್ಮಂತಹವರನ್ನು ಬೀಡಿ ಸೇದುವ ಪರಿಸ್ಥಿತಿಗೆ ಸರ್ಕಾರ ತಳ್ಳಿದೆ. ಅದಕ್ಕೆ ದುಃಖವಿಲ್ಲ. ಈ ಸಂದರ್ಭದಲ್ಲಿ ಯಾವುದೋ ಒಂದು ಚಿತ್ರದಲ್ಲಿ ಒಂದು ಹಾಡು ಇರುವುದು ಜ್ಞಾಪಕಕ್ಕೆ ಬರುತ್ತದೆ. ಅದು ಏನೆಂದರೆ "ಕಾಲೇಪಾರ್, ಪೀಲೇ ಬೀಡಿ, ಬಚಾಲೆ ಘರ್ ಕೀಷಾರ್" ಎಂಬುದು. ಎಲೆ ಅಡಿಕೆ ಹಾಕಿಕೊಳ್ಳುವುದು, ಬೀಡಿ ಸೇದುವುದು, ಮನೆ ಕೀರ್ತಿ ಉಳಿಸುವುದು, ಅಷ್ಟೇ ಅಲ್ಲದೆ ಇನ್ನೇನೋ ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವುದಕ್ಕೆ ಅವನಲ್ಲಿ ಹಣಕಾಸಿನ ಯೋಗ್ಯತೆ ಇರುವುದಿಲ್ಲ. ಆದ್ದರಿಂದ ಬಡವರಿಗೆ ಬಂಧು ಆಗಿರತಕ್ಕಂಥ ಬೀಡಿಯ ಮೇಲೆ ಸರ್ಕಾರ ತೆರಿಗೆ ಹಾಕಿ ಮೈಸೂರು ಸಂಸ್ಥಾನದಲ್ಲಿರತಕ್ಕಂಥ ಅನೇಕ ಬೀಡಿ ಕೈಗಾರಿಕೆಗಳನ್ನು ಮುಚ್ಚುವುದಕ್ಕೆ ಅವರು ಕಾರಣರಾಗಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಜನರ ಆರೋಗ್ಯ ಹೆಚ್ಚಾಗುತ್ತದೆ. Productivity ಹೆಚ್ಚಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಈಗ ನಮಗೆ ಗೊತ್ತಿದ್ದಹಾಗೆ ಗಣೇಶ ಬೀಡಿ ಎನ್ನುವುದು ಒಂದು ದೊಡ್ಡ ಸಂಸ್ಥೆ. ಆ ಬೀಡಿ ಮೈಸೂರು ಸಂಸ್ಥಾನದಲ್ಲಿ ಬಹಳವಾಗಿ ಖರ್ಚಾಗುತ್ತದೆ. ಹೀಗೆ 30ನೇ ನಂಬರ್ ಬೀಡಿ ಹೆಚ್ಚಿಗೆ ಖರ್ಚಾಗುತ್ತಿದೆ. ಹೀಗೆ ಬೀಡಿಗಳಲ್ಲಿ ಅನೇಕ ತರಹ ಬೀಡಿಗಳಿವೆ. ಈಚೆಗೆ ಕಾಂಗ್ರೆಸ್ ಬೀಡಿ, ಕಾಳಹಸ್ತಿ ಬೀಡಿ ಎಂದು ಬೇರೆ ಇವೆ. ಹೊರಗಡೆಯಿಂದ ಬರತಕ್ಕ ಬೀಡಿಗಳೊಡನೆ ನಮ್ಮ ಬೀಡಿಗಳು ಸ್ಪರ್ಧಿಸಿ ನಿಲ್ಲುವುದು ಕಷ್ಟವಾಗಿದೆ. ಹೀಗಿರುವಲ್ಲಿ ಇಲ್ಲಿ ತೆರಿಗೆ ಇನ್ನೂ ಜಾಸ್ತಿ ಮಾಡಿದರೆ ಹೊರಗಿನವರಿಗೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ. ಅವರು competition ಹೆಚ್ಚಿಸುತ್ತಾರೆ. ನಮ್ಮ ಸಂಸ್ಥಾನದ ಕೆಲಸಗಾರರಿಗೆ, ವ್ಯಾಪಾರಗಾರರಿಗೆ ತೊಂದರೆಯಾಗುತ್ತದೆ. ಈ ವಿಷಯವಾಗಿ ಸರ್ಕಾರದವರೇಕೆ ಪರಿಶೀಲನೆ ಮಾಡುವುದಿಲ್ಲವೋ ನನಗಂತೂ ಗೊತ್ತಾಗುವುದಿಲ್ಲ. ಅವರು ಹೇಳತಕ್ಕ logic, ಅವರು ಕೊಡತಕ್ಕ ಕಾರಣ ಮತ್ತು ವಿವರಣೆಗಳಿಗೆ ಇದರಿಂದ ವಿರುದ್ಧವಾದ ಪರಿಣಾಮಗಳಾಗುತ್ತವೆ. ಇದನ್ನು ಸರ್ಕಾರದವರು ಮನಗಾಣಬೇಕು. ಈಗ ನಮ್ಮ ದೇಶದಲ್ಲಿ ಬೀಡಿ ಕೈಗಾರಿಕೆಯಿಂದ ಜೀವನ ಮಾಡುತ್ತಿದ್ದಾರೆ. ದಿವಸಕ್ಕೆ ನಮ್ಮಲ್ಲಿ 25 ಲಕ್ಷ ಬೀಡಿ ಸೇದುತ್ತಾರೆಂದಿಟ್ಟುಕೊಂಡರೂ ಒಬ್ಬೊಬ್ಬರಿಗೆ ಹತ್ತು ಬೀಡಿಯಂತೆ ಎರಡು ಕೋಟಿ ಐವತ್ತು ಲಕ್ಷ ಬೀಡಿಗಳನ್ನು ಸೇದುತ್ತಾರೆಂದು ಹೇಳಬಹುದು. ಇಷ್ಟು ಹೆಚ್ಚು ಜನ ನಮ್ಮಲ್ಲಿ ಬೀಡಿ ಸೇದುತ್ತಿರುವಾಗ ಈ ಕೈಗಾರಿಗೆ ರಕ್ಷಣೆ ಕೊಡಬೇಕೆಂದು ಹೇಳಿ ಸಮಿತಿಯವರು ಒಂದು ಕಾಸು ಹಾಕಬೇಕೆಂದು ಹೇಳಿದರೆ. . . .

ಶ್ರೀ ಕಡಿದಾಳ್ ಮಂಜಪ್ಪ.—ಸಮಿತಿಯವರು ಬೀಡಿಯ ವಿಚಾರದಲ್ಲಿ ಬದಲಾವಣೆ ಮಾಡಬೇಕೆಂದು ಹೇಳಲಿಲ್ಲ; ಮದ್ರಾಸಿನಲ್ಲಿ ಬೀಡಿಗೆ exemption ಇದೆ, ಇಲ್ಲಿ ಒಂದು ಕಾಸಿದ್ದರೆ ಸಾಕು ಎಂದು ಹೇಳಿದರು. ಈಗ ಮದ್ರಾಸಿನಲ್ಲಿ Exemption ಮಾಡಿಲ್ಲ, ಅದಕ್ಕೆ ಬದಲು ಆರು ಕಾಸು ವಿಧಿಸುತ್ತಾರೆ. ಅಷ್ಟಿರುವಾಗ ನಮ್ಮಲ್ಲಿ ಮೂರು ಕಾಸು ಮಾತ್ರ ಕೊಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಆ ವಾದವೇ ನನಗೆ ಹಿಡಿಸುವುದಿಲ್ಲ. ಏಕೆಂದರೆ, ಆ ವಾದದಲ್ಲಿ Reasonನ್ನೇ ಕಾಣುವುದಿಲ್ಲ. ಸುಮ್ಮನೆ ನೀತಿ ಬೋಧನೆ, ಗುರಿ ಬೇರೆ. ಅಂತೂ ಹಣ ಬರಬೇಕೆಂಬುದು ನಿಮಗೆ. ಯಾರಿಗೆ ಏನೇ ಕಷ್ಟವಾಗಲಿ, ನಷ್ಟವಾಗಲಿ ನಿಮ್ಮ ಉದ್ದೇಶ, ಬರತಕ್ಕ ಹಣ ಬಂದೇ ಬರಬೇಕು ಎಂಬುದು ನಿಮ್ಮ ಆಸೆ. ಎಲ್ಲಿಂದಲೇ ಆಗಲಿ ಖಜಾನೆಗೆ ದುಡ್ಡು ಬಂದರೆ ಆಯಿತೆಂಬುದು ನಿಮ್ಮ ನೀತಿ. ಹೀಗಾದರೆ ಬೀಡಿ ಸೇದುವವರು ಯಾರೂ ಕಾಂಗ್ರೆಸ್ಸಿಗೆ ವೋಟು ಮಾಡುವುದಿಲ್ಲ. ಸುಮಾರು 25 ಲಕ್ಷ ವೋಟುಗಳು ಕಾಂಗ್ರೆಸ್ಸಿಗೆ ತಪ್ಪಿಹೋಗುತ್ತವೆ. ಈ ದೃಷ್ಟಿಯಿಂದಲಾದರೂ. . . .

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಮಕ್ಕಳು ಬೀಡಿ ಸೇದುವುದನ್ನು ತಪ್ಪಿಸಿದರಲ್ಲ ಎಂದು ಹೇಳಿ ಇನ್ನೂ ಹೆಚ್ಚು ಜನ ವೋಟು ಕೊಡುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ತೆರಿಗೆ ಜಾಸ್ತಿ ಮಾಡಿ ತಮ್ಮ ಮಕ್ಕಳಿಗೆ ಬೀಡಿ ಸೇದದಿರುವಂತೆ ಮಾಡುವುದಕ್ಕೆ ಸರ್ಕಾರ ಸಹಾಯ ಮಾಡಿತು ಎಂದು ಹೇಳಿ ವೋಟನ್ನು ಸರ್ಕಾರಕ್ಕೇ ಕೊಡೋಣವೆಂದು ಹೇಳಿ ಕೊಡುತ್ತಾರೆ ಎಂದು ಹೇಳಿದರು. ಮಕ್ಕಳಿಗೆ ವೋಟು ಮಾಡುವ ಅಧಿಕಾರವಿರುವುದಿಲ್ಲ. ಅವರಿಗೆಷ್ಟು ತೊಂದರೆಯಾಗುತ್ತದೆಯೆಂಬುದನ್ನು ಕೂಡ ಅವರು ಮರೆಯುವದಿಲ್ಲವೆಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಇವೊತ್ತು ಎಷ್ಟೋ ಜನ ಬೀಡಿ ಕೈಗಾರಿಕೆ ನಡೆಸುವ ಮಾಲೀಕರು ನಮ್ಮ ದೇಶದಲ್ಲಿದ್ದಾರೆ. ನಮ್ಮ ಮಾನ್ಯ ಮಂತ್ರಿಗಳಿಗೆ ಗೊತ್ತಿರುವ ಹಾಗೆ ತೀರ್ಥಹಳ್ಳಿಯಲ್ಲಿಯೇ ಖಾದರ್ ಸಾಹೇಬರೆಂಬ ಬೀಡಿ ಮಾಲೀಕರು ಹಿಂದೆ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಎಷ್ಟೋ ಸಹಾಯ ಮಾಡಿದರು. ಇಂದು ಅವರು. . .

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಖಾದರ್ ಸಾಹೇಬರನ್ನು ನನ್ನ ಮೇಲೆ ಎತ್ತಿ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಪರಿಸ್ಥಿತಿ ಯಾವ ರೀತಿ ಯಿದೆಯೆಂಬುದನ್ನು ಹೇಳಿದೆನೇ ಹೊರತು ಎತ್ತಿ ಕಟ್ಟಬೇಕೆಂದು ಹೇಳುತ್ತಿಲ್ಲ. ಏಕೆಂದರೆ ಬೀಡಿಯವರು ಬಹಳ ವರ್ಷದಿಂದ ಕಾಂಗ್ರೆಸ್ಸಿಗೆ ಸಹಾಯ ಮಾಡುತ್ತಾ ಬಂದಿದ್ದಾರೆ. ಬೀಡಿ ಕೈಗಾರಿಕೆಯವರಿಗೂ ಬಹಳ ಖರ್ಚುಗಳಿವೆ. ಅವರು ಕೂಲಿ ಕೊಟ್ಟುಕೊಂಡು ಹೋಗಬೇಕು. ಎಲೆಗಳನ್ನು ಆರಿಸಬೇಕು. ಅನೇಕ ವೇಳೆ ಎಲೆಗಳಿಗೆ ಬೆಂಕಿ ಬೀಳುವುದೂ ಉಂಟು. ಇವೊತ್ತು ಕಷ್ಟದೆಶೆಯಲ್ಲಿರತಕ್ಕ ಈ ಕೈಗಾರಿಕೆಗೆ ಉತ್ತೇಜನ ಕೊಡಬೇಕೆಂದು ಹೇಳಿ ತೆರಿಗೆಯನ್ನು ಒಂದು ಕಾಸು ಮಾಡಬೇಕೆಂದು ಸಲಹೆ ಮಾಡಿದ್ದರೆ, ಒಂದು ಕಾಸು ಇರುವುದನ್ನು ಒಂದಕ್ಕೆ ಮೂರರಷ್ಟು ಏರಿಸಿದ್ದಾರೆ. 50 ರೂಪಾಯಿ ತೆರಿಗೆ ಕೊಡುತ್ತಿದ್ದವನು ಇನ್ನು ಮೇಲೆ 150 ರೂಪಾಯಿ ಕೊಡಬೇಕಾಗಿ ಬರುತ್ತದೆ. ತಂಬಾಕಿನ ಬೆಲೆ ಜಾಸ್ತಿಯಾಗಿದೆ, ಅದಕ್ಕೆ ಸುಂಕ ಬೇರೆ ಹೆಚ್ಚು ಮಾಡಿದೆ, ಎಲೆಗಳನ್ನು ತರಿಸುವು

(ಶ್ರೀ ಎಸ್. ಗೋಪಾಲಗೌಡ.)

ದಕ್ಕೆ ಕೂಲಿಗಾರರಿಗೆ ಜಾಸ್ತಿ ದರಗಳನ್ನು ಕೊಡಬೇಕಾಗಿದೆ. ಮೈಸೂರಿನಲ್ಲಿ ಬೀಡಿ ಕೆಲಸಗಾರರು ಮುಷ್ಕರ ಹಿಡಿದಿದ್ದಾರೆ. ಹೀಗೆಯೇ ಅನೇಕ ಕಡೆ ಮುಷ್ಕರಗಳಾಗುತ್ತಿವೆ! ಹೀಗೆಲ್ಲಾ ಆಗಿ ಬೀಡಿ ಕೈಗಾರಿಕೆಯವರು ಅನೇಕ ಕಷ್ಟಗಳಿಗೆ ಗುರಿಯಾಗಿದ್ದಾರೆ. ಅಲ್ಲದೆ ಬೀಡಿಯನ್ನು ಯಾರು ಕಟ್ಟುತ್ತಾರೆ ಎಂದರೆ, ಮನೆಯಲ್ಲಿರತಕ್ಕ ಹೆಂಗಸರು. ಈ ಗೃಹ ಕೈಗಾರಿಕೆಯಿಂದ ಅನೇಕರಿಗೆ ಕೆಲಸ ಸಿಕ್ಕಿದೆ. ಹೀಗಿರುವಾಗ ಈ ಮಸೂದೆ ಕಾನೂನಾದರೆ ನಿಜವಾಗಿಯೂ ಅನೇಕ ಬಡ ಸಂಸಾರಗಳಿಗೆ ಹೊಡೆತ ಬೀಳುತ್ತದೆ. ಹೊರಗಡೆಯವರಿಗೆ ನಮ್ಮ ಜನರಮೇಲೆ ಪೈಪೋಟಿ ನಡೆಸಿ ತಮ್ಮ ವ್ಯಾಪಾರ ಹೆಚ್ಚುಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈಗ ಗೋವಾದಲ್ಲಿ ಹೇಗಿದೆಯೆಂಬುದನ್ನು ನೋಡಬಹುದು. ಸಿಗರೇಟು ಬೀಡಿ ಎಲ್ಲವೂ ಕಮ್ಮಿ ದರಕ್ಕೆ ಅಲ್ಲಿ ಸಿಕ್ಕುತ್ತಿವೆ. ಇದರಿಂದಾಗಿ ಅಲ್ಲಿಂದ ಬಹಳ ಮಟ್ಟಿಗೆ smuggle ಆಗುತ್ತದೆ. ಹೊರಗಡೆಯಿಂದ ಗೋವಾದಲ್ಲಿ ಹೋಗಿ ಯಾರೂ ವ್ಯಾಪಾರ ಮಾಡುವುದಕ್ಕಾಗುವುದೇ ಇಲ್ಲ. ಅಲ್ಲಿ ಸುಂಕ ಇಲ್ಲದಿರುವುದರಿಂದ ಹೆಚ್ಚಿನ ವ್ಯಾಪಾರ ನಡೆಯುತ್ತದೆ. ಅಲ್ಲಿನ ಜನರಿಗೆ ತಮ್ಮ ಕೈಗಾರಿಕೆಗಳನ್ನು ರೂಢಿಸಿಕೊಳ್ಳಲು ಬಹಳ ಅನುಕೂಲವಾಗಿದೆ. ಅಂಥದನ್ನು ಮಾಡುವುದನ್ನು ಬಿಟ್ಟು ನಮ್ಮ ಸರ್ಕಾರದವರು ಏನೋ ಹಣ ಬರುತ್ತದೆಂದು ಮಾಡುತ್ತಿದ್ದಾರೆ. ನಮ್ಮ ಕೈಗಾರಿಕೆಗೆ ಧಕ್ಕೆ ಬರುತ್ತದೆಂಬುದನ್ನು ನೋಡುತ್ತಿಲ್ಲ. ಈ ಮಸೂದೆಯನ್ನು, ಖಂಡಿತವಾಗಿಯೂ ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇಲ್ಲಿ ಎರಡನೆಯ ಪ್ಯಾರಾದಲ್ಲಿ ಇನ್ನೊಂದು ತೆರಿಗೆಯನ್ನು ಹೇಳಿದೆ.

	Rate of tax
Part II. "Cigarettes which are sold by the first dealer at less than three pies per cigarette and are to be sold at any retail point to the consumer at not more than 3 pies per cigarette.	Three pies in the rupee of such turnover.
5. Cigars and cheroots which are sold by the first dealer at less than 2 annas per cigar or cheroot and are to be sold at any retail point to the consumer at not more than 2 annas per cigar or cheroot."	Do

ಎಂದು ಹೇಳಿದೆ.

ಸಾಮಾನ್ಯ ಬೀಡಿ ಬಿಟ್ಟರೆ, ಜನ ಹೆಚ್ಚಿಗೆ ಸೇದುವುದು ಸಿಗರೇಟು—ಸಿಸರ್ಸ್, ಎಲಿಫೆಂಟ್, ಬೇರ್ಸ್, ಇಂಥವು. ಯಾವುದೇ ಆಗಲಿ ಮೂರು ಕಾಸಿಗೆ ಕಮ್ಮಿಯಾಗಿ ಮಾರಾಟವಾಗುವ ಯಾವ ಸಿಗರೇಟೂ ಸಿಕ್ಕುವುದಿಲ್ಲ. ಎಕ್ಸೈಸ್ ಸುಂಕ ಜಾಸ್ತಿಯಾಗಿ ಸಿಗರೇಟಿನ ದರವೂ ಜಾಸ್ತಿಯಾಗಿದೆ. ಮೂರು ಕಾಸಿಗೆ ಕಮ್ಮಿ ಇರತಕ್ಕ ಸಿಗರೇಟು ಮತ್ತು 51ನೆಯ ಕ್ಲಾಜಿನಲ್ಲಿ ಹೇಳಿರುವ ಷಿರೂಟ್—ಇದು ಸಾಮಾನ್ಯ ಜನರು ಸೇದತಕ್ಕದ್ದು. ಸ್ಪೆನ್ಸರ್ ಮುಂತಾದ ಸಿಗರೇಟ್‌ಗಳೆಲ್ಲಾ ಸಾಮಾನ್ಯ ಜನರು ಸೇದತಕ್ಕವಲ್ಲ. ಸಾಮಾನ್ಯ ಜನರು ಷಿರೂಟ್ ಸೇದುತ್ತಾರೆ. ಇದಕ್ಕೆ ಕೂಡ ತೆರಿಗೆಯನ್ನು ಡಬ್ಬಲ್ ಮಾಡಿದ್ದಾರೆ. ಇದರಿಂದಲೂ ಕೈಗಾರಿಕೆಗೆ ಹೊಡೆತ ಬೀಳುತ್ತಿದೆ. ಇದರಿಂದ ಸಿಟಿಯವರಿಗೆ ಹೆಚ್ಚಿಗೆ ಕಷ್ಟವಾಗುತ್ತದೆ. ಈ ಕಾರಣದಿಂದ ಸರ್ಕಾರದವರು ಮತ್ತೆ ಪರ್ಯಾಲೋಚನೆ ಮಾಡಬೇಕು. ಕೇವಲವಾಗಿ, ಮದ್ರಾಸ್ ಸರ್ಕಾರದವರು ಮಾಡುತ್ತಾರೆಂದು ಹೇಳಿ ನಾವು ಮಾಡುವುದು ಸರಿಯಲ್ಲ. ಹೋದ ಸಲ ತೆರಿಗೆ ಹಾಕಿದಾಗ ಒಂದು ವಾದ ಹಿಡಿದರು. ಯಾವ ವಾದ ತಮ್ಮ ಮನಸ್ಸಿಗೆ ಅನುಕೂಲವಾಗಿ ಬರುತ್ತದೋ ಅದನ್ನು ತೆಗೆದುಕೊಂಡು ಬಾಕಿ ವಾದವನ್ನು convenient ಆಗಿ ಮರೆತುಬಿಡುತ್ತಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನೀವೂ ಹಾಗೆಯೇ ಮಾಡುತ್ತೀರಿ.

ಶ್ರೀ ಎಸ್. ಗೋಪಾಲಗೌಡ.—ನಾವು ಹಾಗೆ ಹೇಳುತ್ತಿಲ್ಲ. ಮದ್ರಾಸ್ ಜನರು ಮಾಡಿದ್ದನ್ನು ನಾವು ತೆಗೆದುಕೊಳ್ಳೋಣ. ಆದರೆ ಕಾಪಿ ಮಾಡಬೇಕೆಂಬ ಮನೋಭಾವ ಹೋಗಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಪ್ರತಿಸಾರಿಯೂ ತಾವೇಕೆ ಬೊಂಬಾಯಿ ಟೆನೆನ್ಸಿ ಆಕ್ಟನ್ನೇ quote ಮಾಡುತ್ತೀರಿ ?

ಶ್ರೀ ಎಸ್. ಗೋಪಾಲಗೌಡ.—ಯಾವುದರಲ್ಲಿ ನ್ಯಾಯವಿದೆಯೋ ಅದನ್ನು ಅನುಸರಿಸುವುದರಲ್ಲಿ ಯಾವ ತಪ್ಪೂ ಇಲ್ಲ. ಆದರೆ ಇನ್ನೊಬ್ಬರನ್ನು ಅನುಸರಿಸುವುದು aping ಆಗಕೂಡದು. ಅಲ್ಲಿ ಬರೀ ಪಂಚೆಯಲ್ಲೇ ಓಡಾಡುತ್ತಾರೆಂದು ಹೇಳಿ ನಾವೂ ಲುಂಗಿಯನ್ನೇ ಉಡಬೇಕೆಂದು ಹೇಳುವುದು ಸರಿಯಲ್ಲ. ಆದ್ದರಿಂದ ಮದ್ರಾಸಿನಲ್ಲಿ ಮಾಡಿದ್ದನ್ನೆಲ್ಲಾ ಮಾಡಬೇಕೆಂದು ಸರ್ಕಾರ ತೋರಿಸುತ್ತಿರುವ ಮನೋಭಾವನೆಯನ್ನು ಬಿಟ್ಟು, ಜನರಿಗೆ ಹೆಚ್ಚಿನ ಉಪಯೋಗವಿದೆಯೇ, ಅದನ್ನು ಹಾಕಬೇಕಾದ ಅಗತ್ಯವಿದೆಯೇ ಎಂಬುದನ್ನು ಪರಿಶೀಲನೆಮಾಡಿ ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇದನ್ನು ತರುವುದರಿಂದ ಬಹಳ ತೊಂದರೆಯಾಗುತ್ತದೆ. ನಮ್ಮ ಸಂಸ್ಥಾನಕ್ಕೂ ಅಷ್ಟಾಗಿ ಹಣ ತರದೆ ಇದ್ದರೂ ಕಿರುಕುಳ ಪರಮಾವಧಿಯನ್ನು ಮುಟ್ಟಿ ನಮ್ಮ ಕೈಗಾರಿಕೆಗಳು ನಶಿಸಿಹೋಗುತ್ತವೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಈಗ ತಂದಿರತಕ್ಕ ತಿದ್ದುಪಡಿಯ ವಿಷಯದಲ್ಲಿ ನಾನು ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದಿದ್ದೇನೆ. ಮದ್ರಾಸಿನಲ್ಲಿ ಆರುಕಾಸು ಮಾಡಿದ್ದಾರೆ, ಮೈಸೂರು ಸಂಸ್ಥಾನದಲ್ಲಿ ಒಂದು ಕಾಸಿದ್ದುದನ್ನು ಮೂರುಕಾಸಿಗೆ ಜಾಸ್ತಿಮಾಡಿದ್ದಾರೆಂದು ಹೇಳಿದರು.

ಶ್ರೀ ಕಡಿದಾಳ್ ಮಂಜಪ್ಪ.—ಮದ್ರಾಸಿನಲ್ಲಿ ಇದುವರೆಗೆ ಬೀಡಿಗೆ ಇರಲಿಲ್ಲ. ಈಗ ಆರುಕಾಸು ಹಾಕಬೇಕೆಂದು ಕಾನೂನು ಮಾಡಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಏನೇ ಆಗಲಿ ಬೀಡಿಗಳ ಮೇಲೆ ತೆರಿಗೆ ಹೆಚ್ಚಿಸಬೇಕೆಂಬುದೇ ಉದ್ದೇಶ. ಬೀಡಿಯೆಂಬುದು, ನನಗೆ ತಿಳಿದಿರುವಮಟ್ಟಿಗೆ ಮತ್ತು ಸರ್ಕಾರದ ಅಧಿಕಾರಿಗಳಿಗೂ ಮತ್ತು ಈ ಸಭೆಯ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವಹಾಗೆ, ಬಡವರ ಜೀವನದ ವ್ಯವಸ್ಥೆಯಾಗಿದೆ. ಗೃಹ ಕೈಗಾರಿಕೆಯೆಂದು ಹೇಳಿ ನಾವೇನು ಹತ್ತು ಜಿಲ್ಲೆಗಳಲ್ಲೂ ಪ್ರಚಾರಕ್ಕೆ ತಂದಿದ್ದೇವೋ ಅದರಿಂದಾಗಿ ನಮ್ಮ ದೇಶದಲ್ಲಿ

ಗೃಹಕೈಗಾರಿಕೆಗಳು ಹೆಚ್ಚಬೇಕು, ಬಡವರ ಜೀವನದ ಮಟ್ಟ ಹೆಚ್ಚಬೇಕೆಂಬ ತತ್ವವನ್ನು ಪ್ರತಿಪಾದನೆ ಮಾಡುತ್ತಿದ್ದೇವೋ, ಈಗ ಈ ಬಿಲ್ಲನ್ನು ತರುವುದರಿಂದ, ಆ ಪ್ರತಿಪಾದಿತ ತತ್ವಕ್ಕೆಲ್ಲಿ ಕಳಂಕ ಬರುತ್ತದೆಯೋ ಎಂಬ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ. ಏಕೆಂದರೆ, ಸಂಸ್ಥಾನದ ಒಂದುಕೋಟಿ ಜನಸಂಖ್ಯೆಯಲ್ಲಿ ಲಕ್ಷೋಪಲಕ್ಷ ಜನ ಬಡವರು ಇದರಿಂದ ಜೀವನ ಮಾಡುತ್ತಿದ್ದಾರೆ. ಹೆಂಗಸರಾದಿಯಾಗಿ ಈ ಕೈಗಾರಿಕೆಯನ್ನು ಪ್ರತಿಯೊಂದು ಊರಿನಲ್ಲಿಯೂ ಮಾಡುತ್ತಿದ್ದಾರೆ. ಹೊರಗಡೆಯಲ್ಲಿ ಹೋಗಿ ಕೆಲಸಮಾಡಲು ಅವಕಾಶವಿಲ್ಲದ ಹೆಂಗಸರು ಒಂದೊಂದು ಕುಟುಂಬದಲ್ಲೂ ಈ ಬೀಡಿಯ ಕೈಗಾರಿಕೆಯನ್ನು ನಡೆಸುತ್ತಿದ್ದಾರೆ. ಅವರು ಈಗಾಗಲೇ ಲೈಸೆನ್ಸ್ ಫೀಯನ್ನೂ ಕೊಡುತ್ತಿದ್ದಾರೆ. ಅವರು ಉಪಯೋಗಿಸುವ ಹೊಗೆಸೊಪ್ಪಿನ ಮೇಲೆ ಬೇರೆ ತೆರಿಗೆ ಬಿದ್ದಿದೆ. ಹೀಗಿರುವಾಗ ಈ ಬಡಜನರಮೇಲೆ ಇನ್ನೂ ತೆರಿಗೆ ಬೀಳುವಂತೆ ಮಾಡಿ ಅವರ ಜೀವನವನ್ನು ಕುಂಠಿತಗೊಳಿಸಿ ಅವರನ್ನು ಪರಿತಪಿಸುವಂತೆ ಮಾಡುವುದು ನ್ಯಾಯವಲ್ಲವೆಂಬ ದೃಷ್ಟಿಯಿಂದ ಈ ಬಿಲ್ಲಿನ ಸಾಧಕ ಬಾಧಕಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಒಂದು ಲೆಕ್ಕಾಚಾರ ಹಾಕೋಣ. ಲೆಕ್ಕಾಚಾರದಮೇಲೆ ತೆರಿಗೆ ಹಾಕುವ ಪದ್ಧತಿ ನಮ್ಮಲ್ಲಿ ಯಾವಾಗಲೂ ಇದೆ. ಮದ್ರಾಸಿನಲ್ಲಿ ತೆರಿಗೆ ಹೆಚ್ಚಿಸಿದ್ದಾರೆ, ಮೈಸೂರಿನಲ್ಲಿ ಕಡಮೆಯಿದೆಯೆಂದು ಮದ್ರಾಸಿನಿಂದ ಇಲ್ಲಿಗೆ ಬರುತ್ತಾರೆ ಎಂದು ಹೇಳಿದರು. ಈಗ ಅಲ್ಲಿ ತೆರಿಗೆ ಹೆಚ್ಚಿಗೆ ಇರುವುದರಿಂದ ಹಾಲಿ ನಮ್ಮಲ್ಲಿ ಹತ್ತು ಲಕ್ಷ ರೂಪಾಯಿಗಳ ಮಾಲು ಖರ್ಚಾಗುತ್ತಿದ್ದರೆ, ಇನ್ನುಮೇಲೆ 20 ಲಕ್ಷ ರೂಪಾಯಿಗಳು ಖರ್ಚಾಗುವಂತಾಗುತ್ತದೆ. 10 ಲಕ್ಷ ರೂಪಾಯಿಗಳ ಬೀಡಿ ಮಾರಾಟವಾಗುತ್ತಿದ್ದುದು 20 ಲಕ್ಷ ರೂಪಾಯಿಗಳ ಬೀಡಿ ಮಾರಾಟವಾಗುವುದಕ್ಕವಕಾಶವಾಗುತ್ತದೆ. ಇದರಿಂದಾಗಿ ಬಡಜನರಿಗೆ ಪ್ರೋತ್ಸಾಹ ಕೊಟ್ಟಂತಾಯಿತು. ನಮ್ಮ ದೇಶಕ್ಕೆ ಹೆಚ್ಚು ಉತ್ಪತ್ತಿ ಬರುವುದಕ್ಕೆ ಅವಕಾಶವಾಯಿತು. ಈ ಅಂಶವನ್ನೂ ಸರ್ಕಾರದವರು ಆಲೋಚನೆ ಮಾಡಬೇಕು.

2-30 P.M.

ಈ ಟ್ಯಾಕ್ಸನ್ನು ಹಾಕುವಾಗ ತಾವು ಈ ಹೊಗೆಸೊಪ್ಪಿಗೇ ಬೇರೆ, ಬೀಡಿಗೇ ಬೇರೆ, ಬೀಡಿ ಸುತ್ತುವುದಕ್ಕೇ ಬೇರೆ, ಬೀಡಿ ಮಾರಾಟಕ್ಕೇ ಬೇರೆ ಹೀಗೆ ನಾಲ್ಕೈದು ವಿಧದಲ್ಲಿ ತೆರಿಗೆ ಹಾಕುತ್ತಿದ್ದೀರಿ. ಇದು ಸರಿಯಾದದ್ದಲ್ಲ. ಇದು ಬಡವರ ವಸ್ತು. ಅನೇಕರು ಊಟಮಾಡಿ ಅಜೀರ್ಣವಾಗಿರುವಾಗ ಈ ಬೀಡಿ ಸೇದತಕ್ಕಂಥ ವಾಡಿಕೆಯುಂಟು. ಈಗಾಗಲೆ ಅನೇಕ ನನ್ನ ಮಾನ್ಯ ಸ್ನೇಹಿತರು ಈ ವಿಚಾರವನ್ನು ತಿಳಿಸಿರುತ್ತಾರೆ. ಇದು ಸಾರ್ವಜನಿಕರು ಉಪಯೋಗಿಸತಕ್ಕಂಥ ವಸ್ತುವಾಗಿದೆ. ತಮಗೆ ಇದರಿಂದ ಈಗ ಒಂದೂವರೆ ಲಕ್ಷ ರೂಪಾಯಿಗಳ ವರಮಾನ ಬರಬಹುದೆಂದು ತಿಳಿಸೋಣವಾಗಿದೆ. ಆದರೆ ನಾವು ಈಗಾಗಲೇ ಇದರ ಮೇಲೆ ಒಂದು ಕಾಸು ತೆರಿಗೆಯನ್ನು ಹಾಕಿದ್ದೇವೆ. ಅದಕ್ಕಾಗಿ ಅವರಿಗೆ ಎಷ್ಟೆಷ್ಟು ಕಷ್ಟನಷ್ಟಗಳಾಗಿರುತ್ತೆಂಬುದನ್ನು ಅವರೀಗ ಸರ್ಕಾರದವರ ಮುಂದೆ ಒಂದು ಮನವಿಮಾಡಿಕೊಳ್ಳಲು ತಾವು ಅವರಿಗೊಂದು ಅವಕಾಶವನ್ನೂ ಸಹ ಕೊಟ್ಟಿಲ್ಲ. ತಾವು ಟ್ಯಾಕ್ಸ್ ಹಾಕುವುದೇನೋ ಹಾಕುತ್ತೀರಿ. ಆದರೆ ಇದರಿಂದ ಅನೇಕ ಟೀಕೆ ಟಿಪ್ಪಣಿಗಳಿಗೆ ಸರ್ಕಾರ ಗುರಿಯಾಗಬೇಕಾಗುವುದು. ಈ ದಿವಸ ಅನೇಕರು ಬೀಡಿಗಡಂಗುಗಳನ್ನಿಟ್ಟುಕೊಂಡು, ಒಂದೊಂದರಲ್ಲೂ 200-300 ಜನರು ತಮ್ಮ ಜೀವನೋಪಾಯವನ್ನು ಪಡೆದುಕೊಂಡು, ಈ ಕಸಬನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇದರ ಸಾಧಕ ಬಾಧಕಗಳನ್ನು ತಾವು ಸಂಪೂರ್ಣವಾಗಿ ಇನ್ನೊಮ್ಮೆ ಪರಿಶೀಲನೆ ಮಾಡಬೇಕಾದದ್ದು ಯುಕ್ತ ಮತ್ತು ಆ ರೀತಿ ಮಾಡಿದ ನಂತರ ತಾವು ಒಂದು ನಿರ್ಧಾರಕ್ಕೆ ಬರಬೇಕಾದದ್ದು ಧರ್ಮ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—One point I want to bring to the notice of the House. I don't plead on behalf of the Government for the imposition of this tax, but one thing is to be considered. So many members plead that our industry would collapse or suffer. If there is no taxation or imposition of any sales-tax and if there is a vast difference between the prices prevailing here and outside, there will be a greater temptation for smuggling. Suppose that happens. They will try to under-sell it. In that case, don't you think that our merchants or the manufacturers will suffer ? Ultimately they will come to trouble.

Sri V. M. MASCARENHAS—In fact, the Madras manufacturer will kill the Mysore manufacturer.

Mr. SPEAKER.—I don't plead on behalf of the Government for the imposition of this taxation. But this point may be considered by the House.

Sri J. MOHAMED IMAM.—The remedy will be worse than the disease. If they really want to improve the local industry, they must exempt the local industry from the levy of sales-tax and tax beedis that are imported from other places.

Sri Kadidal MANJAPPA.—I am surprised to hear this plea for making discrimination against the constitutional provisions. It cannot be done. Between two citizens dealing in the same commodity, you cannot apply different rates or exempt a particular individual or one class of individuals. It will be discriminatory. I am a lawyer of 15 years' standing. I have consulted the legal opinion also

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ಮಾನ್ಯ ಮಂತ್ರಿಗಳು ಇಂಥ ಒಂದು ತಿದ್ದುಪಡಿಯನ್ನು ತಂದಿದ್ದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಈಗಾಗಲೇ ಮಾತನಾಡಿರುವಂಥ ಅನೇಕ ಜನ ಮಾನ್ಯ ಸದಸ್ಯರುಗಳು ಈ ಬೀಡಿಸುತ್ತುವುದು ಒಂದು ಗೃಹಕೈಗಾರಿಕೆ,

(ಶ್ರೀ ಟಿ. ಹನುಮಯ್ಯ.)

ಇದನ್ನು ಕಾಪಾಡಿಕೊಂಡು ಬರಬೇಕು, ಇದರಮೇಲೆ ಈ ತೆರಿಗೆಗಳನ್ನು ಹಾಕಿದರೆ ಈ ಕಸಬಿನಿಂದ ಜೀವನ ಮಾಡತಕ್ಕವರಿಗೆ ಬಹಳ ತೊಂದರೆಯಾಗುತ್ತದೆ ಎಂದು ಹೇಳಿದರು. ಆದರೆ ನಮ್ಮ ದೇಶದಲ್ಲಿ ಈ ಹಿಂದೆ ಇಂಥ ಯಾವ ಬೀಡಿ ಕಾರ್ಖಾನೆಗಳೂ ಇರಲಿಲ್ಲ. ಆಗ ಜನರಿಗೆ ಜೀವನ ನಡೆಸಲು ಯಾವ ತೊಂದರೆಯೂ ಇರಲಿಲ್ಲ. ನಮ್ಮ ಹಿಂದಿನವರೆಲ್ಲಾ ಎಕ್ಕೆ ಎಲೆಯಲ್ಲಿ ತಂಬಾಕನ್ನು ಹಾಕಿ ಚುಟ್ಟಾ ಕಟ್ಟಿಕೊಂಡು ಸೇದುತ್ತಿದ್ದರು. ಆಗಿನ ಕಾಲದಲ್ಲಿ ಇಂಥ ಚುಟ್ಟಗಳನ್ನು ಸೇದುತ್ತಿದ್ದವರು ಯಾರೆಂದರೆ—ಕೇವಲ 80 ವರ್ಷಗಳ ವಯಸ್ಸಿನ ಮುದುಕರುಗಳು ಮಾತ್ರ ಸೇದುತ್ತಿದ್ದರು. ಈಗಲಾದರೋ ಯಾವ ಹುಡುಗನ ಬಾಯಲ್ಲಿ ನೋಡಿದರೂ ಈ ಬೀಡಿಗಳೇ ಇರುತ್ತವೆ. ಹೀಗೆ ಹುಡುಗರೆಲ್ಲಾ ಬೀಡಿ ಸೇದಲು ಪ್ರಾರಂಭಿಸಿರುವುದರಿಂದ ಈ ದಿವಸ ಅವರ ಆರೋಗ್ಯ ಕೆಡುತ್ತಿದೆ. ಇದಕ್ಕಾಗಿ ಸರ್ಕಾರದವರು ಕೆಲವು ಕಾನೂನುಗಳನ್ನು ಕೂಡ ಮಾಡಿದ್ದಾರೆ. ಆದರೇನೂ ಅವುಗಳಿಂದ ಪ್ರಯೋಜನವಾಗಿಲ್ಲ. ಹೀಗಾಗಿ ಈ ದಿವಸ ನಮ್ಮ ಯುವಕ ಜನಾಂಗ ಅತಿಯಾಗಿ ಈ ಬೀಡಿ-ಸಿಗರೇಟುಗಳನ್ನು ಸೇದುವುದಕ್ಕೆ ಪ್ರಾರಂಭಿಸಿರುವುದರಿಂದ ಇಂಥ ತರುಣರಿಂದ ಜನನವಾಗತಕ್ಕ ಮಕ್ಕಳು ಮರಿಗಳಾದರೋ ಅವರು ಸಾಕಷ್ಟು ದೃಢಕಾಯರಾಗಿರುವುದಿಲ್ಲ. ಅವರಲ್ಲಿ ಧೈರ್ಯ ಸ್ಥೈರ್ಯಗಳಿರುವುದಿಲ್ಲ. ಹೀಗಾಗಿ ನಮ್ಮ ಮುಂದಿನ ಜನಾಂಗ ಬಹಳ ಕ್ಷೀಣಗತಿಯನ್ನೈದುತ್ತಿದೆ. ಆದುದರಿಂದ ತಾವು ಇದರ ಬಗ್ಗೆ ಈಗ ತೆರಿಗೆಯನ್ನು ಹೆಚ್ಚಿಸಿರುವುದು ಸಾಧುವಾದದ್ದಾಗಿದೆ. ಈಗಿನ ಜನಾಂಗ ಈ ಸೇದುವುದನ್ನು ಒಂದು ಫ್ಯಾಷನ್ನನ್ನಾಗಿ ಆಚರಣೆಗೆ ತಂದಿದೆ. ಆದ್ದರಿಂದ ಹೀಗೆ ತೆರಿಗೆಯನ್ನು ಹೆಚ್ಚಿಸಿದ್ದರಿಂದಲಾದರೂ ಕೆಲವರು ಈ ಸೇದುವ ಅಭ್ಯಾಸವನ್ನು ಬಿಟ್ಟು ಬಿಡಲು ಅವಕಾಶವಿದೆ. ಇಷ್ಟೇ ಅಲ್ಲದೆ, ಸ್ವಾಮಿ, ನಮಗೆ ಈ ಬೀಡಿ ಸಿಗರೇಟುಗಳನ್ನು ಸೇದತಕ್ಕಂಥಾ ಅಗತ್ಯವೇ ಇಲ್ಲ. ನಾವು ವಾಸಮಾಡುತ್ತಿರುವ ದೇಶ ಬಹಳ ಉಷ್ಣದೇಶ. ಇಂಗ್ಲೆಂಡ್—ಅಮೇರಿಕಾ ಇತ್ಯಾದಿ ದೇಶದ ಜನಗಳಿಗಾದರೆ—ಅವು ಶೀತ ದೇಶಗಳಾದ್ದರಿಂದ ಅವರಿಗೆ ಅಲ್ಲಿ ಈ ಬೀಡಿ-ಚುಟ್ಟ ಸಿಗರೇಟು ಇತ್ಯಾದಿಗಳ ಅಗತ್ಯವಿರಬಹುದು. ಇಲ್ಲಿ ಈಗಾಗಲೇ ಮಾತನಾಡಿದ ಕೆಲವು ಸದಸ್ಯರು ಅಜೀರ್ಣವಾದಾಗ ಕೆಲವರು ಈ ಬೀಡಿ ಸೇದಸತಕ್ಕಂಥ ಒಂದು ಅಭ್ಯಾಸವಿದೆ ಎಂದು ಹೇಳಿದರು. ಆದರೆ ಬಡವರಾಗಿರತಕ್ಕವರಿಗೆ ಹಾಗೆ ಅಜೀರ್ಣವಾಗತಕ್ಕಂಥ ಸಂದರ್ಭಗಳೇ ಇರುವುದಿಲ್ಲ. ಅವರು ಬೆಳಗಾದರೆ ಕೆಲಸಕ್ಕೆ ಬಗ್ಗಬೇಕಾಗಿರುತ್ತದೆ. ಅವರಿಗೆಲ್ಲಾ ಅಗತ್ಯವಾಗಿ ಬೇಕಾಗಿರುವುದು ಅಡಕೆ-ವೀಳ್ಯದೆಲೆ ಮಾತ್ರ. ಇಷ್ಟರಲ್ಲೇ ಅವರು ತೃಪ್ತರಾಗುತ್ತಾರೆ. ಅಷ್ಟೇನೂ ಅವರಿಗೆ ಈ ಬೀಡಿ-ಸಿಗರೇಟುಗಳ ಅಗತ್ಯವಿರುವುದಿಲ್ಲ. ಆದಕಾರಣ ಇದೊಂದು ಗೃಹ ಕೈಗಾರಿಕೆ, ಇದರಮೇಲೆ ತೆರಿಗೆ ಹಾಕಿದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಬಡ ಜನಗಳಿಗೆಲ್ಲಾ ತೊಂದರೆಯಾಗುತ್ತದೆಂದು ಹೇಳಿದ ವಾದ ಸರಿಯಾದದ್ದಲ್ಲ. ಮೊದಲಿಂದಲೂ ಈ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಿಕೊಂಡು ಬಂದಿರತಕ್ಕಂಥ ಜನಗಳಿಗೆ ಈಗ ತೆರಿಗೆ ಹಾಕಿದರೆ ಅವರ ಜೀವನೋಪಾಯಕ್ಕೆ ತುಂಬ ತೊಂದರೆಯಾಗುತ್ತದೆ ಎಂದು ಹೇಳಿದ್ದನ್ನು ನಾನು ಒಪ್ಪಲಾರೆ. ಈಗ ಸರ್ಕಾರದವರು ತಂದಿರತಕ್ಕ ತಿದ್ದುಪಡಿ ಸಮಯೋಚಿತವಾಗಿದೆ ಮತ್ತು ದೇಶದ ಹಿತದೃಷ್ಟಿಯಿಂದಲೂ ಕೂಡ ಬಹಳ ಅವಶ್ಯಕವಾಗಿದೆ ಎಂದು ಹೇಳುತ್ತೇನೆ. ಈ ಒಂದು ಪ್ರಯತ್ನದಿಂದ ದೇಶದಲ್ಲಿ ಬೀಡಿ ಸೇದತಕ್ಕವರ ಸಂಖ್ಯೆ ಬಹಳ ಕಡಿಮೆಯಾಗುತ್ತದೆ. ಆದುದರಿಂದ ಈಗ ಸರ್ಕಾರದವರು ತಂದಿರತಕ್ಕ ತಿದ್ದುಪಡಿಯಿಂದ ದೇಶಕ್ಕೆ ಕ್ಷೇಮ ಉಂಟಾಗುವ ಸೂಚನೆಗಳಿರುವುದರಿಂದ ನಾನು ಇದನ್ನು ಹೃತ್ಪೂರ್ವಕವಾಗಿ ಸಮರ್ಥಿಸುತ್ತೇನೆ.

*ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ-ಹೆಗ್ಗಡದೇವನಕೋಟೆ).—ಸ್ವಾಮಿ, ಈ ತಿದ್ದುಪಡಿ ಮಸೂದೆಯನ್ನು ಸಭೆಯಮುಂದೆ ಮಂಡಿಸತಕ್ಕ ಕಾಲದಲ್ಲಿ ಮಾನ್ಯ ಮಂತ್ರಿಗಳು ಮದ್ರಾಸಿನಲ್ಲಿ ಈಗ ಈ ಬೀಡಿಗಳಮೇಲೆ ತೆರಿಗೆಯನ್ನು ಜಾಸ್ತಿಮಾಡಿದ್ದಾರೆ, ಆ ರೇಟಿಗನುಗುಣವಾಗಿ ನಮ್ಮಲ್ಲಿಯೂ ಈ ಬೀಡಿಗಳು ಮಾರಾಟವಾಗುವಂತೆ ಮಾಡತಕ್ಕ ಬಗ್ಗೆ ನಾವೂ ಕೂಡ ಇಲ್ಲಿ ಈಗ ಈ ಬೀಡಿಯಮೇಲೆ ಹಾಕಿರತಕ್ಕಂಥ ತೆರಿಗೆಯನ್ನು ಹೆಚ್ಚುಮಾಡಬೇಕಾಗಿದೆ ಎಂದು ಹೇಳಿದರು. ಮತ್ತು ಇದರಿಂದ ಸರ್ಕಾರಕ್ಕೂ ಕೂಡ ವರಮಾನ ಹೆಚ್ಚುತ್ತದೆ ಎಂದು ಹೇಳಿದ್ದಾರೆ. ಆದರೆ ಈಗ ಮದ್ರಾಸಿನಲ್ಲಿ ಒಂದು ರೂಪಾಯಿಗೆ ಆರುಕಾಸು ತೆರಿಗೆಯನ್ನು ಹಾಕಿದ್ದಾರೆ. ನಮ್ಮ ಮೈಸೂರಿನಲ್ಲಿ ಈಗ ಒಂದು ಕಾಸು ತೆರಿಗೆ ಇದ್ದುದನ್ನು ಮೂರು ಕಾಸಿಗೆ ಹೆಚ್ಚಿಸಬೇಕೆಂದು ಹೇಳಿರುವುದು ಮಾನ್ಯ ಮಂತ್ರಿಗಳು ತಿಳಿಸಿರುವಂಥ ಕಾರಣಕ್ಕೆ ಇದು ವಿರೋಧವಾಗಿದೆ. ಈಗಾಗಲೇ ಮಾತನಾಡಿರುವಂಥ ಶ್ರೀ ಸೋಲೂರು ಸಿದ್ದಪ್ಪನವರು ಈ ಹಿಂದೆ ಈ ಬೀಡಿಗಳ ಮೇಲೆ ಒಂದು ರೂಪಾಪಾಯಿಗೆ ಒಂದು ಕಾಸು ತೆರಿಗೆಯನ್ನು ಹಾಕಿದ್ದಾಗ ನಮ್ಮ ದೇಶದಲ್ಲಿ ಈ ಬೀಡಿಗಳಿಗೆ ಹೆಚ್ಚಿನ ಗಿರಾಕಿಗಳಿದ್ದರೆಂದು ಹೇಳಿದರು. ಈಗಲೂ ಅದೇ ರೀತಿ ಇಟ್ಟುಕೊಂಡರೆ ನಮ್ಮ ಗಿರಾಕಿಗಳು ಇನ್ನೂ ಹೆಚ್ಚುವುದಕ್ಕೆ ಅವಕಾಶವಿದೆ. ಆದರೆ ಈಗ ತಾವು ಇಲ್ಲಿಯ ಬೀಡಿಗಳಿಗೆ ತೆರಿಗೆ ಹಾಕಿದರೆ ನಮ್ಮ ಕೈಗಾರಿಕೆಗೆ ಬಹಳ ಧಕ್ಕೆ ಬರುತ್ತದೆ. ಈ ಹಿಂದೆ ಮದ್ರಾಸಿನಲ್ಲಿ ಈ ತೆರಿಗೆ ಇಲ್ಲದ್ದರಿಂದ ಆ ಮಂಗಳೂರು ಬೀಡಿಗಳು ನಮ್ಮ ದೇಶಕ್ಕೆ ಹೆಚ್ಚಿಗೆ ಬರುತ್ತಿದ್ದವು. ಆಗ ನಮ್ಮ ದೇಶದ ಕೈಗಾರಿಕೆ ಬಹಳ ಧಕ್ಕೆಯುಂಟಾಗಿತ್ತು. ಆದ್ದರಿಂದ ತಾವೀಗ ನಮ್ಮ ಬೀಡಿಗಳಿಗೆ ಇಲ್ಲಿ ತೆರಿಗೆ ಹೆಚ್ಚಿಸಿದರೆ ನಮ್ಮ ಕೈಗಾರಿಕೆಗೆ ಎರಡು ಕಡೆಗಳಿಂದಲೂ ಧಕ್ಕೆಯನ್ನುಂಟು ಮಾಡಿದ ಹಾಗೆ ಆಗುತ್ತದೆ. ಈ ದಿವಸ ನಮ್ಮ ದೇಶದ ಮಾಲಿಗೆ ಹೊರಗಡೆಯ ಗಿರಾಕಿ ಜಾಸ್ತಿ ಆದರೆ ಆಗ ನಮಗೆ ಈ ಟ್ಯಾಕ್ಸಿಗಿಂತಲೂ ಹೆಚ್ಚಾಗಿ ಅಂದರೆ ದ್ವಿಗುಣ-ತ್ರಿಗುಣವಾಗಿ ಹೆಚ್ಚು ಸೇಲ್ಸ್ ಟಾಕ್ಸ್ ರೂಪವಾಗಿ ಆದಾಯ ಬರಲು ಅವಕಾಶವಿರುತ್ತದೆ. ಆಗ ನಮಗೆ ಈ ರೂಪವಾಗಿ ಬರಬೇಕಾಗಿದ್ದಂಥ ವರಮಾನ ಬೇರೆ ರೂಪದಲ್ಲಿ ಬಂದಹಾಗಾಯಿತು. ಆದುದರಿಂದ ಈಗ ತಂದಿರತಕ್ಕಂಥ ತಿದ್ದುಪಡಿ ಸರಿಯಾದ್ದುದಲ್ಲವೆಂದು ಕಾಣುತ್ತದೆ. ಈ ದಿವಸ ಆ ಮಂಗಳೂರು ಗಣೇಶ ಮಾರ್ಕಿನ ಬೀಡಿಗಳು ಮಾರುಕಟ್ಟೆಯಲ್ಲಿ ಒಂದು ಕಟ್ಟಿಗೆ ಎರಡೂವರಾಣೆಯ ಪ್ರಕಾರ ಬಿಕರಿಯಾಗುತ್ತಿವೆ. ಇವುಗಳಮೇಲೆ ಈಗ ಸೇಲ್ಸ್ ಟ್ಯಾಕ್ಸ್ ಮತ್ತು ತೆರಿಗೆ ಇತ್ಯಾದಿಗಳನ್ನು ಹಾಕುವುದರಿಂದ ಇದಕ್ಕೆ ಒಂದೂಕಾಲು ಕಾಸು ತೆರಿಗೆ ಹಾಕಬೇಕಾಗುತ್ತದೆ. ಅಂದರೆ ಒಂದೂಕಾಲು ಕಾಸನ್ನು ಹಾಕುವುದಕ್ಕಾಗುವುದಿಲ್ಲ. ಅದಕ್ಕೆ ಎರಡು ಕಾಸುಗಳನ್ನೇ ಹಾಕಬೇಕಾಗಿದೆ. ಅಂದರೆ ಎರಡು ಕಾಸು ತೆರಿಗೆಯನ್ನು ಕೂಡ ಹಾಕುವುದಕ್ಕಾಗುವುದಿಲ್ಲ. ಆಗ ಮೂರು ಕಾಸನ್ನೇ ಹಾಕಬೇಕಾಗುತ್ತದೆ. ಅಲ್ಲಿಗೆ ಅದರ ಬೆಲೆ ಒಂಭತ್ತು ಕಾಸು ಜಾಸ್ತಿ ಮಾಡಿದಂತಾಯಿತು. ಇದನ್ನು ಕೊಂಡುಕೊಂಡುಹೋಗಿ ಮಾರಾಟ ಮಾಡ

ತಕ್ಕವರು ನೂರಕ್ಕೆ ಹತ್ತರಷ್ಟು ನಷ್ಟ ಸೇರಿಸಿ ಮಾರಾಟ ಮಾಡಬೇಕಾಗುತ್ತದೆ. ಆದುದರಿಂದ ಹೀಗೆ ತಾವು ತೆರಿಗೆಯನ್ನು ಹೆಚ್ಚಿಸುವುದರಿಂದ ಅನುಕೂಲವಾಗುತ್ತದೆಯೋ ಅಥವಾ ಅನಾನುಕೂಲವಾಗುತ್ತದೆಯೋ ಅನ್ನುವುದನ್ನು ಮತ್ತೊಮ್ಮೆ ಪರಿಶೀಲನೆಮಾಡಿ ತರಬೇಕಾದದ್ದು ಯುಕ್ತವೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri V. M. MASCARENHAS.—Unfortunately, the trend of the argument has gone from the proper objects of the Bill to something else. There has been a contention that the Mysore beedi manufacturer will suffer by the increase of rate from one pie to three pies. I beg to differ from this standpoint for the simple reason that, as it is, 75 per cent of the beedi trade in Mysore is in the hands of outsiders. To-morrow when we retain the sales-tax of one pie while Madras is having sales-tax of six pies, the tendency will be for a heavy influx of Madras beedies coming into the State.

Sri K. PATTABHIRAMAN.—If the cost of production of the Mysore dealer now at one pie is such as to give him only one-third of the market and two-thirds of the market is already controlled by the non-Mysorean dealer, the cost of production being increased by this addition of 2 pies—how does this comparison stand as regards the Mysore dealer ?

Sri V. M. MASCARENHAS.— You have forgotten one important thing. The Madras dealer who is now paying one pie would have to pay 3 pies tomorrow.

Sri K. PATTABHIRAMAN.—What about the Mysore dealer ? His cost of production goes up by 2 pies.

Sri V. M. MASCARENHAS.—Mysore will keep the same one pie and allow the Madras dealer to dump his beedies.

Sri K. PATTABHIRAMAN.—That is merely the *status quo*.

Sri V. M. MASCARENHAS.—Hitherto in Madras there was no sales-tax and the Madras manufacturer, in spite of one pie in Mysore, was dumping the beedies. If to-day Madras inflicts sales-tax of 6 pies and Mysore retains one pie, what is the result of beedi trade ? As it is, the beedi manufacturers in Madras, specially the South Canara people, are dumping beedies in Mysore. If you don't bring any kind of parity between the sales-tax in Madras and the sales-tax in Mysore, but retain the sales-tax at one pie in Mysore, I am sure the increase in Madras beedi will go up to 90 per cent; so that the object that we should try to help the Mysore beedi manufacturer you will not be able to fulfil, but you will be doing the most irreparable harm to our manufacturers. When this subject came up for discussion at the time the Sales Tax Committee took up this question, there was the representation from the beedi manufacturers; they first pleaded for a higher taxation on Madras beedies as compared to Mysore beedies. As it was viewed by legal experts that it was against the Constitution, it was dropped. Then I think they only pleaded for this, that, as far as possible, the sales-tax in Madras and Mysore should remain the same. We gave them other facilities like removal of sales-tax on *thupra* leaves, on thread and some other facilities and thereby helped the local manufacturers. I can assure the Hon'ble House that if we retain one pie tax that is in force, while Madras goes on raising it to six pies, the Mysore manufacturer will not only be hit hard and Mysore will not only lose revenue, but the Mysore beedi trade will practically be at a stand-still.

***Sri Mulka GOVINDA REDDY** (Chitaldrug).—Sir, I have to oppose the Mysore Sales Tax (Second Amendment) Bill. Last year, when a similar Bill was placed before this Assembly for its approval, the Minister then pleaded that the Madras Government had introduced an amendment to the Sales-tax Act in Madras whereby the rates of tax were increased on varieties of cigarettes and when members of this Assembly pleaded that since beedi was an article which was used by the poor people in the State and when Madras was levying this tax. . . .

Sri Kadidal MANJAPPA.—There is no question of levying fresh tax in the case of beedis. The beedi manufacturer was paying since 1948 at the rate of six pies. But it is only last year on the ground that there was

(SRI KADIDAL MANJAPPA.)

exemption in Madras, Hon'ble Members pleaded that the tax should be reduced.

Sri Mulka GOVINDA REDDY.—Not only on the ground that Madras was not levying any tax on beedi, but also on the ground that it was an article used by a good number of people and used specially by the poorer sections of the people, and that it was not reasonable for the Government to continue to levy tax on beedis. And, we pleaded that the Government of Mysore should follow suit with regard to the taxation on beedi as in Madras. We also stated that when one State introduced sales-tax on certain articles, it was not necessary that the neighbouring State should also follow suit.

Sir, last year, this tax was introduced in Madras and the same tax was introduced and levied in Mysore, but in Bombay and Hyderabad, they did not follow suit. Again, now the Minister says that Madras have revised their attitude towards beedis and have introduced six pies levy of sales-tax on beedis and that they have also enhanced the rate of sales-tax on cigarettes. Again, Sir, the neighbouring States of Hyderabad and Bombay are not contemplating to increase the sales-tax that is prevailing in those areas. In Hospet a packet of cigarettes will cost about 13 annas, but in Muradabad it costs about 10 annas. There is that disparity. I really cannot understand why this Government of Mysore should become His Master's Voice of Madras.

Sir, the tobacco grower has been hit hard. There are huge stocks of tobacco lying with the grower not only in Mysore but also in Andhra. Several representations were made to the Government of India that the tobacco grower should be protected. The Government of India, I understand, are taking some steps to give some protection to the tobacco grower and help him. When such is the case, the levy of tax that the Government of Mysore want to, is going to hit hard the tobacco grower. It is not only going to hit hard the grower but it is also going to hit hard the beedi manufacturing industry in Mysore State. There are, I understand, 40,000 persons who are engaged in the manufacture of beedis in Mysore State. Sri Devaraj Urs has pointedly made out a case that it is a cottage industry and this industry is not in the hands of a few people as some people may imagine. It is an industry which has spread into the villages, into the homes—the women folk in the homes manufacture these beedis. By levying this tax on beedis, it is going to hit hard this industry and it will so happen that some of the proprietors of small concerns may have to close down, thereby depriving so many thousands of people who are working in this industry for their livelihood. On every pound of tobacco used by the beedi manufacturers, they are paying a central excise duty of 14 annas per pound in advance and they are subjected to income-tax, sales-tax and other local taxes.

The Hon'ble Minister was telling us that most of the beedis are imported from Madras. He was not making a correct statement when he said that most of the beedis that are used in Mysore State are imported from Madras. They are imported from Madras as well as from Bombay. We know, Sir, that beedis manufactured in some areas in Dharwar district are imported into Davangere and other places. By increasing the levy of tax at 300 per cent, Government hopes to enhance its revenues by 1½ lakhs of rupees. I can infer that they were getting Rs. 75,000 as sales-tax on beedies. When worked out, the figures show that about 1,44,00,000 worth of beedis are used in Mysore State. So much so, it gives an indication that a large number of people in Mysore State are using beedies. By levying the enhanced tax on beedies, it is going to hit hard on the poorman's pleasure.

Sir, clause (2) of section 2 also—I would like to oppose. At present "cigarettes which are sold by the first dealer at less than three pies per cigarette and are to be sold at any retail point to the consumer at not more than 3 pies per cigarette" and again "cigars and cheroots which are sold by the first dealer at less than 2 annas per cigar or cheroot and are to

be sold at any retail point to the consumer at not more than two annas per cigar or cheroot"—In this also, they want to increase the levy from three pies to $\frac{1}{8}$ per cent of such turnover. It means that they want to increase it by 200 per cent. Sir, the cigarettes that are going to be taxed under these two categories are cheap cigarettes which are used by labourers, middle-class people and poor people. When such is the case, is it reasonable and ethical on the part of the Government to tax the already over-burdened people with this new levy? Sir, it may be that the manufacturers of these cigarette companies are making huge profits. If Government has the will, the desire and the courage to tax those people, let them levy property tax or let them levy turnover tax or if they have got the boldness, let them nationalise these so called India Limited companies, this Imperial Tobacco Company, which has got its factories in Bangalore and Calcutta. They are making crores of rupees. If these Beedies are the industries you are levying tax on, you are levying tax on the poor man and you want to extinguish him. If you have got the courage, if you want to stand by the people and if you want to serve the people, here is an industry. Take it over and you can make huge profits if you have the courage to do it.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲು) — ಸ್ವಾಮಿ, ಮೈಸೂರು ಸೇಲ್ಸ್ ಟ್ಯಾಕ್ಸ್ amendment ಬಿಲ್ಲಿನ ಮೇಲೆ ಮಾತನಾಡುತ್ತಾ ಬೀಡಿಯ ಮೇಲೆ ಒಂದು ಕಾಸಿನಿಂದ ಮೂರು ಕಾಸಿಗೆ ತೆರಿಗೆಯನ್ನು ಏರಿಸ ಬೇಕು ಎನ್ನುವ ವಿಚಾರದಲ್ಲಿ ಅನೇಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಹಾಗೆ ವ್ಯಕ್ತಪಡಿಸುವಾಗ ಅದು ಬಡವರ Luxuryಗೋಸ್ಕರವಾಗಿ ಉಪಯೋಗಿಸತಕ್ಕಂಥ ವಸ್ತು ಎಂದು ವಾದವನ್ನು ಮಾಡಿದ್ದಾರೆ. ಆಮೇಲೆ Cottage Industry ruin ಆಗುತ್ತದೆಯೆಂದು ಹೇಳಿದ್ದಾರೆ. ಈಗಾಗಲೇ ಶ್ರೀ ವ್ಯಾಸ್ಕರ್‌ನ್ಯಾಸ್‌ರವರು ಕೊಟ್ಟಿರತಕ್ಕಂಥ ಉತ್ತರ ಸಮಂಜಸವಾಗಿದ್ದರೂ ಕೂಡ ಅವರ ಮನಸ್ಸಿಗೆ ಹಿಡಿಸಿಲ್ಲವೆಂದು ನನಗನ್ನಿಸುತ್ತದೆ. ಈ ಸಭೆಯಲ್ಲಿ ನಾನು ಸ್ವಲ್ಪ ಜವಾಬ್ದಾರಿಯನ್ನು ಅರಿತು ಮಾತನಾಡ ಬೇಕೆಂದು ನಿಂತಿದ್ದೇನೆ. ಅನೇಕರು ಹೊಗೇಸೊಪ್ಪು, ಬೀಡಿಎಲೆ, ಇವುಗಳ ವಿಷಯವಾಗಿ ಅನುಭವ ಇರುವವರು ಅವರ ಅನುಭವವನ್ನು ಹೆಚ್ಚಿಗೆ ತಿಳಿಸಿದ್ದಾರೆ. ಇದು ವರೆಗೆ ಇಲ್ಲಿ ನಡೆದಿರುವ ಚರ್ಚೆಯಲ್ಲಿ ನಮ್ಮ ದೇಶದಲ್ಲಿ consumeಆಗತಕ್ಕ ಬೀಡಿ $\frac{3}{4}$ ಭಾಗ ಹೊರಗಡೆಯಿಂದ ಬರತಕ್ಕ ವಸ್ತು ಎಂದು ಹೇಳಿದರು. ಹೀಗೆ ಒಂದು ರೂಪಾಯಿನಲ್ಲಿ 12 ಆಣೆಯಷ್ಟು ಹೊರಗಡೆಯಿಂದ ಬರತಕ್ಕ ವಸ್ತುವಿನ ಮೇಲೆ ತೆರಿಗೆ ಒಂದು ಕಾಸಿನಿಂದ ಮೂರುಕಾಸಿನವರೆಗೂ ಏರಿಸಿದರೆ ನಮ್ಮ ಕೈಗಾರಿಕೆಗೆ ಯಾವರೀತಿ ನಷ್ಟವೊದಗುತ್ತದೆ ಮತ್ತು ಆ ವಾದವನ್ನು ಹೇಗೆ ಸಮರ್ಥಿಸುತ್ತೀರಿ ಎಂಬುದು ನನಗೆ ಅರ್ಥವಾಗುವುದಿಲ್ಲ. ಈ Cottage Industry ಇತ್ತೀಚೆಗೆ ಬಂದಿರತಕ್ಕದ್ದಲ್ಲ; ನೂರಾರು ವರ್ಷಗಳಿಂದ ನಡೆದುಬಂದಿರತಕ್ಕದ್ದು. ನೂರಾರು ವರ್ಷಗಳಿಂದ ನಡೆದುಬಂದಿರತಕ್ಕಂಥ Cottage industry ಎಷ್ಟು ಬದಲಾವಣೆಯಾಗಬೇಕೋ ಅಷ್ಟು ಆಗಲೇ ಬೇಕಾಗಿದೆ.

3 P. M.

ಇದಕ್ಕಿಂತಲೂ ಇನ್ನೂ ಹೆಚ್ಚಾಗಿ developಆಗುತ್ತದೆಂಬ ನಿರೀಕ್ಷಣೆ ನಮಗಂತೂ ಇಲ್ಲ. ಈಗಾಗಲೇ ಮಾನ್ಯ ಸದಸ್ಯರು ತಿಳಿಸಿರುವಹಾಗೆ ಯಾವುದು ಉತ್ತಮ ವಾದುದು ಎಂದು ನಮಗೆ ಅಭಿರುಚಿ ಉಂಟಾಗುತ್ತದೆಯೋ ಅದನ್ನು ಉಪಯೋಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಯೇ ಹೊರತು ನಮ್ಮ ಮನೆಯಲ್ಲೇ ತಯಾರಾಗತಕ್ಕ ಬೀಡಿಯನ್ನು ಉಪಯೋಗಿಸಬೇಕೆಂದು ಹೇಳುವ ಜನ ಕಡಮೆ. ಆದ್ದರಿಂದ ಈ ತೆರಿಗೆಹಾಕಿದ್ದರಿಂದ ನಮ್ಮ ಕೈಗಾರಿಕೆಗೆ ದಕ್ಕೆಯಾಗುತ್ತದೆಂದು ಹೇಳುವ ವಾದದಲ್ಲಿ ತಿರುಳಿಲ್ಲವೆಂದು ನಾನು ತಿಳಿಸಬೇಕಾಗಿದೆ. ವ್ಯಾಸ್ಕರ್‌ನ್ಯಾಸ್‌ರವರು ಹೇಳಿದಹಾಗೆ, ಮದ್ರಾಸಿನಲ್ಲಿ ಆರುಕಾಸಿಗೆ ಏರಿಸಿ, ಇಲ್ಲಿ ಒಂದು ಕಾಸನ್ನೇ ಇಟ್ಟುಕೊಂಡಿದ್ದರೆ, ಅಲ್ಲಿ ತಯಾರಾದಂಥ ಮಾಲನ್ನು ಇಲ್ಲಿಗೆ dumpಮಾಡಿ ಪಕ್ಕದ ಸರ್ಕಾರದವರೂ ರೆವಿನ್ಯೂ ಕಳೆದುಕೊಳ್ಳುವುದಲ್ಲದೆ, ನಮ್ಮ ಕೈಗಾರಿಕೆಗೆ ಸಹ ಧಕ್ಕೆಯಾಗುತ್ತದೆಂಬುದನ್ನು ನಾವು ತಿಳಿದುಕೊಳ್ಳಬೇಕಾದ್ದು ಅವಶ್ಯಕ.

ಆಮೇಲೆ ಬೀಡಿಯು ಬಡವರ pleasure (ಸುಖದಾಯಕ ವಸ್ತು) ಎಂದು ಹೇಳುವ ವಾದ ಬಂತು. ಅದಕ್ಕೆ ಅಷ್ಟು ಸಮರ್ಥನೆಯೂ ಬರಲಿಲ್ಲ. ಅಲ್ಲದೆ, ನಾವು ನೋಡಿರುವ ಹಾಗೆ, ಈ ಮಾನ್ಯ ಸಭೆಯ Opposition ಲೀಡರರಾದ ಶ್ರೀ ಇಮಾಂರವರೂ ಬೀಡಿಯನ್ನೇ ಸೇದುತ್ತಾರೆ. ಸಿಗರೇಟ್ ಸೇದಿದರೆ ಅಷ್ಟು ಹಿತವಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಬರೀ ಬಡವರೇ ಬೀಡಿ ಸೇದುತ್ತಾರೆ ಇನ್ನು ಯಾರೂ ಅದನ್ನು ಸೇದುವುದಿಲ್ಲವೆಂದು ಹೇಳುವುದರಲ್ಲಿ ತಿರುಳಿಲ್ಲ. ಆದ್ದರಿಂದ ಶ್ರೀ ಗೋಪಾಲಗೌಡರು ಬೀಡಿ ಸೇದತಕ್ಕವರ ಬೆಂಬಲವನ್ನು ಪಡೆಯುವುದಕ್ಕೆ ಹೊರಟು, ಬೀಡಿ ಸೇದದೆ ಇರತಕ್ಕವರನ್ನೂ ಸೇದುವಂತೆ ಮಾಡಿ ಈ ದಿಸಿ ದುರಭ್ಯಾಸವನ್ನು ಪ್ರಚಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿರುವಂತೆ ಕಾಣುತ್ತದೆ. ಹೀಗೆ ಅವರು ಹೆಂಡವನ್ನು ಕುಡಿಯುವುದನ್ನು ತಪ್ಪಿಸುವುದು ಬೇಡ, ಹೆಂಡ ಬೇಕು, ಬೀಡಿ ಕುಡಿಯುವುದನ್ನು ತಪ್ಪಿಸುವುದು ಬೇಡ, ಬೀಡಿ ಕುಡಿಯುವುದು ಬೇಕು ಎಂದು ಹೇಳುತ್ತಾ ಈ ದುರಭ್ಯಾಸಗಳನ್ನು ಉಳಿಸಿಕೊಳ್ಳುವುದಕ್ಕೆ ಹೊರಟಿದ್ದಾರೆಂದು ಗೊತ್ತಾಗುತ್ತವೆ. ನಮಗಾದರೋ ಜನರ ನೀತಿಯ ಮಟ್ಟವನ್ನು ಅಭಿವೃದ್ಧಿಪಡಿಸುವುದು ನಮ್ಮ ಧರ್ಮ. ದುರಭ್ಯಾಸಕ್ಕೆ ಇನ್ನಷ್ಟು ಪ್ರೋತ್ಸಾಹ ಕೊಟ್ಟು ಜನತೆಯ ನೈತಿಕ ಮಟ್ಟವನ್ನು ಕೆಳಕ್ಕಿಳಿಸುವುದು ಸರಿಯಲ್ಲ.

Sri Mulka GOVINDA REDDY.—It is not proper that he should go on misrepresenting what Sri Gopala Gowda said, Sir.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ನಾನು ಅವರು ಏನನ್ನು ತಮ್ಮ ವಾದದಲ್ಲಿ ಹೇಳಿದರೋ ಅದೇ ವಾದವನ್ನು ಉದಹರಿಸಿ ಹೇಳುತ್ತಿದ್ದೇನೆಯೇ ಹೊರತು ಅವರನ್ನು misrepresentಮಾಡುತ್ತಿಲ್ಲ. ನ್ಯಾಯವಾಗಿ ಹೇಳುವುದಾರೆ, ಅಲ್ಲಿ (ಮದ್ರಾಸಿನಲ್ಲಿ) ಆರುಕಾಸನ್ನು ವಿಧಿಸುವಾಗ ಅವರ ಮಾಲು ಇಲ್ಲಿಗೆ ಬರದಂತೆ ತಡೆಗಟ್ಟಿ ನಮ್ಮ ದೇಶದ ಕೈಗಾರಿಕೆಯನ್ನು ಹೆಚ್ಚಿಸಬೇಕು ಅಭಿವೃದ್ಧಿ ಪಡಿಸಬೇಕೆಂದು ಹೇಳಿ ಅದಕ್ಕೆ ಸೂಕ್ತ ಮಾರ್ಗಗಳನ್ನು ಅವರು ಸೂಚಿಸಬೇಕಾಗಿತ್ತು. ಈ ತೆರಿಗೆಯನ್ನೂ ಆ ಮಟ್ಟಕ್ಕೆ ಏರಿಸಿ ಎಂದು ಹೇಳಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು.

ಶ್ರೀ ಎಸ್. ಗೋಪಾಲಗೌಡ.—ಇದು ತಿರುವು ಮುರುವು ನೀತಿ!

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆದುರಿಂದ ನಮ್ಮ ದೇಶದ ಕೈಗಾರಿಕೆಗೆ ಧಕ್ಕೆ ಬರುವ ರೀತಿಯಲ್ಲಿ ಇದನ್ನು ಮಾಡಿದ್ದೇವೆಂದು ಹೇಳುತ್ತಾ, ಹೊರಗಡೆಯಿಂದ ಬರತಕ್ಕ ಸಾಮಾನುಗಳಮೇಲೂ ತೆರಿಗೆ ಹಾಕುವುದು ಬೇಡ ಎಂದು ಹೇಳುವುದು, ಅದೇ ಸಂದರ್ಭದಲ್ಲಿ ಬಾವಿ, ರಸ್ತೆಗಳು ಸ್ಕೂಲುಗಳು ಮುಂತಾದವು ಬೇಕೆಂದು ವಾದಿಸುವುದು ನ್ಯಾಯವೇ? ಹೀಗೆ ಹೇಳುತ್ತಿದ್ದರೆ ನಾವು ದೇಶದ ಹಿತದೃಷ್ಟಿಯಿಂದ ಜನರ ಹಿತ ದೃಷ್ಟಿಯಿಂದ ಮಾತನಾಡುತ್ತಿರುತ್ತೇವೆಯೇ ಎಂಬುದನ್ನು ಯೋಚಿಸಬೇಕು. ಅಲ್ಲದೇ ಬೀಡಿ ಸೇದತಕ್ಕ ಅಭ್ಯಾಸವಿರುವವರು ಒಂದು ಕಾಸು ತೆರಿಗೆಯಿದ್ದರೂ ಸೇದುತ್ತಾರೆ, ಮೂರುಕಾಸಿದ್ದರೂ ಸೇದುತ್ತಾರೆ. ಜೊತೆಗೆ, ಈಗಲೂ ಒಂದು ಬೀಡಿ ಬಂಡಲ್‌ಗೆ ಒಂದು ರೂಪಾಯಿ ಇದ್ದರೆ ಅದಕ್ಕೆ ತೆರಿಗೆಯನ್ನು ಒಂದು ಕಾಸನ್ನೇ ಹಾಕುತ್ತಿಲ್ಲ. ಮೂರು ಕಾಸನ್ನೇ ವಿಧಿಸುತ್ತಿದ್ದಾರೆ. ಒಂದು ಕಾಸನ್ನೇ ವಿಧಿಸಿದ್ದರೂ ಮೂರು ಕಾಸನ್ನೇ ವಸೂಲು ಮಾಡುತ್ತಿರುವಾಗ ನಾವೇ ಏಕೆ ಮೂರು ಕಾಸಿಗೆ ಏರಿಸಕೂಡದು? ಅಲ್ಲದೆ 1½ಲಕ್ಷ ರೂಪಾಯಿಗಳನ್ನು ಮಾತ್ರ ಈ ಬಾಬಿನಿಂದ ನಿರೀಕ್ಷಿಸುತಿದ್ದೇವೆ. ಜನ ಸಾಮಾನ್ಯರಿಗೆ ಇದೇನೂ ಹೆಚ್ಚು ಹೊರೆಯಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ನೀವು ಎಷ್ಟೇ ಮಾತನಾಡಿದರೂ 25 ಲಕ್ಷ ವೋಟುಗಳು ಹೋಗಿಯೇ ಹೋಗುತ್ತವೆ.

ಶ್ರೀ ಕಡಿದಾಳ್ ಮಂಜಪ್ಪ.—ನಾವು ವೋಟಿಗಾಗಿ ಕೆಲಸ ಮಾಡುತ್ತಿಲ್ಲ.

ಶ್ರೀ. ಟಿ. ಎಚ್. ಮೂಡಲಗಿರಿಗೌಡ.—ಈಗ ನಾವು ವಸೂಲು ಮಾಡುತ್ತಿರುವುದು ಬೀಡಿ ಕೈಗಾರಿಕೆಯ ಮಾಲೀಕರು ವಸೂಲು ಮಾಡುತ್ತಿರುವುದರಲ್ಲಿ ಸಾಮಾನ್ಯವಾಗಿ ಅರ್ಧಭಾಗ ಮಾತ್ರ. ನಾವು ಇದುವರೆಗೂ ಒಂದು ಕಾಸು ಹಾಕುತ್ತಿದ್ದೆವು. ಮದ್ರಾಸಿನಲ್ಲಿ ಏನೂ ಇಲ್ಲವೆಂದು ಹೇಳುವಾಗ ನಾವು ಒಂದು ಕಾಸು ಹಾಕಿ ಹೊರಗಿನ ಪೈಪೋಟಿಯನ್ನು ತಡೆಗಟ್ಟಬೇಕೆಂದು ಮಾಡಿದ್ದೆವು. ಈಗ ಮದ್ರಾಸಿನವರು ಆರುಕಾಸು ತೆರಿಗೆ ಹಾಕಿರುವುದರಿಂದ ನಾವು ಅದಕ್ಕೆ ತಕ್ಕ ಕಾರ್ಯಕ್ರಮವನ್ನು ಕೈಕೊಂಡು ಹೊರಗಿನ ಪೈಪೋಟಿಯನ್ನು ತಡೆಗಟ್ಟಿ ನಮ್ಮ ಕೈಗಾರಿಕೆಗೆ encouragement ಕೊಡಬೇಕಾದುದು ಅವಶ್ಯಕ. ಅಲ್ಲದೆ, ಎಲೆ, ಹೊಗೆಸೊಪ್ಪು ಮುಂತಾದವುಗಳ ವಿಷಯದಲ್ಲಿ ಉತ್ತಮವಾದ ಪದಾರ್ಥಗಳನ್ನು ತರಿಸಿಕೊಟ್ಟು ಸರ್ಕಾರದವರು ಅವರಿಗೆ ಸಹಾಯಮಾಡಿ, ಈ ಕೈಗಾರಿಕೆಯಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ಕೂಲಿ ಬರುವಂತೆ ಕಡಮೆ ದರ್ಜೆಯ ಬೀಡಿಗಳು ತಯಾರಾಗುವುದನ್ನು ತಪ್ಪಿಸಿ ಉತ್ತಮ ದರ್ಜೆಯ ಬೀಡಿಗಳ ಬರುವುದಕ್ಕೆ ಉತ್ತೇಜನ ಕೊಡಬೇಕಾಗಿದೆ. ಹೊರಗಡೆಯಿಂದ ಬರತಕ್ಕ ಬೀಡಿಗಳನ್ನು ತಡೆಗಟ್ಟುವುದಕ್ಕೆ ಸರಿಯಾಗಿ ಇಲ್ಲಿನ ಬೀಡಿಗಳನ್ನೂ ಉತ್ತಮಪಡಿಸಬೇಕು. ಬೀಡಿಗಳು ಚೆನ್ನಾಗಿಲ್ಲದಿದ್ದರೆ, ಕಾಸಿಗೆ 16 ಬೀಡಿಯೆಂದರೂ ಯಾರು ಕೊಂಡುಕೊಳ್ಳುವುದಿಲ್ಲ. ಉತ್ತಮದರ್ಜೆಯದಾದರೆ ಆಣೆಗೊಂದು ಬೀಡಿಯಾದರೂ ಕೊಂಡುಕೊಳ್ಳುತ್ತಾರೆ. ಹಾಗೆ ನಾವು ಉತ್ತಮಪಡಿಸಿಕೊಡುವಂಥ ರೀತಿಯಲ್ಲಿ ಕೆಲಸಮಾಡಬೇಕೆಂದಿರುವಾಗ, ಇವೊತ್ತಿನ ದಿವಸ ಒಂದು ಕಾಸಿದ್ದುದನ್ನು ಮೂರು ಕಾಸು ಮಾಡಿದರೆ ಈ ಗೃಹಕೈಗಾರಿಕೆ ನಶಿಸಿಹೋಗುತ್ತದೆಂದು ಹೇಳುವುದರಲ್ಲಿ ತಿರುಳಿಲ್ಲವೆಂದು ಹೇಳುತ್ತೇನೆ.

ಈ ದೃಷ್ಟಿಯಿಂದ ನೋಡುವುದಾದರೆ ಈಗ ನಾವು ಹಾಕಿರುವ ಮೂರು ಕಾಸು ಸರಿಯಾಗಿದೆ. ಈ ಬಿಲ್ಲಿನ ಮೇಲೆ ಮಾತನಾಡುತ್ತಾ ಶ್ರೀಮಾನ್ ದೇವರಾಜ ಅರಸ್‌ನವರು ಒಂದು ಉತ್ತಮವಾದ ಸಲಹೆಯನ್ನು ಮಾಡಿದರು. ಬೀಡಿ ಕೈಗಾರಿಕೆಯವರಿಗೆ ಅವಶ್ಯಕವಾದ ತೂಪರದೆಲೆಯು ನಮ್ಮ ದೇಶದಲ್ಲಿ ಎಲ್ಲಿ ಚೆನ್ನಾಗಿ ಬೆಳಸಬಹುದೆಂಬುದನ್ನು ಕಂಡುಹಿಡಿದು ಅದನ್ನು ಬೆಳೆಸಲು ತಕ್ಕ ಉತ್ತೇಜನವನ್ನು ಕೊಡಬೇಕೆಂದು ಹೇಳಿದರು. ಇದನ್ನೂ ನಾವು ಪರಿಶೀಲಿಸೋಣ. ಈಗ ಹೊರಗಡೆಯಿಂದ ಎಲೆ ತರಿಸಿದರೆ ಅವರಿಗೇನು ಖರ್ಚು ಬೀಳುತ್ತಿದೆ, ನಾವೇ ಬೆಳೆಸಿದರೆ ಅನುಕೂಲವಾಗುವುದಿಲ್ಲವೇ ಎಂಬುದನ್ನು ನೋಡೋಣ. ಇದೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ನಮ್ಮ ಬೀಡಿಯವರು ಹೊರಗಡೆಯವರೊಡನೆ compete ಮಾಡುವಂತೆ ಮಾಡಬೇಕು. ಇದೆಲ್ಲಾ ಮಾಡಬೇಕಾದರೆ ಸರ್ಕಾರದವರು ತಕ್ಕ ಏರ್ಪಾಡುಗಳನ್ನು ಮಾಡಬೇಕಾಗುತ್ತದೆ. ಆದ್ದರಿಂದ ಕಮ್ಮಿ ತೆರಿಗೆ ಕೊಡುವುದರಿಂದ ಏನೂ ಪ್ರಯೋಜನ ಇವರಿಗೆ ಆಗುವುದಿಲ್ಲ. ಈಗಲೂ ಬೀಡಿ ಮಾಲೀಕರು ಕೂಲಿಯವರಿಗೆ ಕಮ್ಮಿ ಕೂಲಿಯನ್ನೇ ಕೊಡುತ್ತಾ ತಾವು ಹೆಚ್ಚಿಗೆ ನಫೆ ಹೊಂದುತ್ತಿದ್ದಾರೆ. ಆದ್ದರಿಂದ ಈ ತೆರಿಗೆ ಹಾಕುವುದರಿಂದ ಕೂಲಿಗಾರರಿಗೇನೂ ಧಕ್ಕೆ ಬರುವುದಿಲ್ಲವೆಂದು ನಾನು ಹೇಳುತ್ತೇನೆ. ಏನಿದ್ದರೂ ಶ್ರೀಮಾನ್ ಮುಲ್ಕ ಗೋವಿಂದರೆಡ್ಡಿಯವರೂ ಮತ್ತು ಗೋಪಾಲಗೌಡರೂ ತಮ್ಮ ಅಪಪ್ರಚಾರದಿಂದ. . . .

ಶ್ರೀ ಎಸ್. ಗೋಪಾಲಗೌಡ.—ಶ್ರೀಮಾನ್ ಗೋಪಾಲಗೌಡರೂ ಮತ್ತು ಗೋವಿಂದರೆಡ್ಡಿಯವರೂ ಅಪಪ್ರಚಾರ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. That is not fair.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದರಿಂದ ಸಾಮಾನ್ಯ ಜನತೆಗೆ ಏನೂ ತೊಂದರೆಯಾಗುವುದಿಲ್ಲ. ಇದರಿಂದ ಬರತಕ್ಕ ಆದಾಯದಿಂದ ಸಾಮಾನ್ಯ ಜನತೆಗೆ ಹೆಚ್ಚಿನ ಪ್ರಯೋಜನ ಅನುಕೂಲ ಲಭಿಸುತ್ತದೆಯೇ ಹೊರತು ನಷ್ಟವಾಗುವುದಿಲ್ಲವೆಂದು ಹೇಳುತ್ತೇನೆ. ಆದ್ದರಿಂದ ಮಾನ್ಯ ಸದಸ್ಯರು ಈ ಬಿಲ್ಲಿನ ವಿಷಯದಲ್ಲಿ ನಿಧಾನವಾಗಿ, ಸಾವಧಾನದಿಂದ ನಿಷ್ಪಕ್ಷಪಾತವಾಗಿ ಯೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕೇ ಹೊರತು ಸುಮ್ಮನೆ ಬಡವರಿಗೆ ತೊಂದರೆಯಾಗುತ್ತದೆಂದು ಯೋಚನೆ ಮಾಡಬಾರದೆಂದು ಹೇಳುತ್ತೇನೆ.

The House rose for Lunch at Ten Minutes past Three of the Clock and re-assembled at Forty Minutes past Three of the Clock.

[MR. SPEAKER in the Chair.]

*ಶ್ರೀ ಜೆ. ಮಹಮ್ಮದ್ ಇಮಾಂ.—ಸ್ವಾಮಿ, ರೆವಿನ್ಯೂ ಮಂತ್ರಿಗಳು ತಂದಿರುವ ಬೀಡಿಗಳ ಮೇಲೆ ಹಾಕಿರತಕ್ಕ ಸುಂಕವನ್ನು ಹೆಚ್ಚಿಸುವ ಬಿಲ್ಲನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಒಂದು ವಿಷಾದವೇನೆಂದರೆ, ಈ ಸರ್ಕಾರದವರಿಗೆ ಒಂದು ನೀತಿಯಿಲ್ಲ, ಒಂದು ಸ್ತಿಮಿತ ವಾದ ಬುದ್ಧಿಯಿಲ್ಲ. ಅವರಿಗಿರುವುದೆಲ್ಲಾ ಒಂದೇ ಧ್ಯೇಯ. ಮಂತ್ರಿಗಳೇ ಹೇಳಿದ್ದಾರೆ, ನಮಗೆ ಏನು ಕೆಲಸ ಮಾಡುವುದಕ್ಕೂ ಹಣ ಬೇಕು ಎಂದು. ಆದ್ದ ರಿಂದ ಸರ್ಕಾರಕ್ಕೆ ಹಣ ಬರಮಾಡಿಕೊಳ್ಳುವುದೊಂದೇ guiding principle. ಅಷ್ಟೇಹೊರತು, ತಾವು ಕೈಕೊಳ್ಳುವ ಬಿಲ್ಲಿನಿಂದ ಪ್ರಜೆಗಳಿಗೆ ಹೊರೆಯಾಗುತ್ತ ದೆಯೇ, ದೇಶಕ್ಕೇನಾದರೂ ತೊಂದರೆಯಾಗುತ್ತ ದೆಯೇ, ಆ ಕೈಗಾರಿಕೆಗೇನಾದರೂ ಧಕ್ಕೆ ಬರುತ್ತ ದೆಯೇ ಎಂಬ ಯೋಚನೆಯನ್ನೇ ಮಾಡುವುದಿಲ್ಲ. ಅವರ ಕನಸೇ ಇದು. ಕಾಂಗ್ರೆಸ್ ಸರ್ಕಾರ ಬಂದಿ ರುವುದೇ ರೈತರ ಮೇಲೆ ಸುಂಕಗಳ ಸುರಿಮಳೆಯನ್ನೇ ಅಲ್ಲ ಗುಡುಗು ಮಿಂಚುಗಳನ್ನೂ ತರುವುದಕ್ಕೆ.

ನನ್ನ ಮಾನ್ಯ ಸ್ನೇಹಿತರಾದಂಥ ಶ್ರೀ ಪಿ. ಆರ್. ರಾಮಯ್ಯನವರು ಹೇಳಿದ್ದು ಸರಿಯಾದ್ದಲ್ಲ. ಗ್ರಾಮಾಂತರ ಪ್ರದೇಶಗಳಲ್ಲೇ ಆಗಲಿ ಅಥವಾ ನಗರ ಪ್ರದೇಶಗಳಲ್ಲೇ ಆಗಲಿ ಈ ಬೀಡಿ ಬಹಳ ಅಗತ್ಯ ವಾದಂಥ ವಸ್ತುವಾಗಿದೆ.

ಶ್ರೀ ಪಿ. ಆರ್. ರಾಮಯ್ಯ.—ಅಂಥ ಇದರ ಅಗತ್ಯವೇನೂ ಇಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಇರಲಿ. ಶ್ರೀ ಪಿ. ಆರ್. ರಾಮಯ್ಯನವರೊಬ್ಬರೇನೋ ಬೀಡಿ ಸೇದು ವುದಿಲ್ಲ. But the factories are there. ಈ ವಸ್ತುವನ್ನು ವ್ಯಾಪಾರಮಾಡತಕ್ಕವರೇ ಅಲ್ಲದೆ ಪ್ರತಿಯೊಬ್ಬ ರೈತನೂ ಸಹ ಉಪಯೋಗಿಸುವುದುಂಟು. ಆದರೆ ಈಗತಾನೆ ನಾನು ಈ ಸರ್ಕಾರಕ್ಕೆ ಒಂದು ಸ್ತಿಮಿತವಾದ ಬುದ್ಧಿಯಿಲ್ಲ ಎಂದು ಏತಕ್ಕಾಗಿ ಹೇಳಿದೆ ನೆಂದರೆ, ಈ ಕಳೆದ ಮೂರು ವರ್ಷಗಳಿಂದಲೂ ಈ ಸರ್ಕಾರ ಹಾಕಿರುವಷ್ಟು ಕಂದಾಯವನ್ನು ಹಿಂದೆ ಯಾವ ಸರ್ಕಾರವೂ ಹಾಕಿಲ್ಲ. ಈ ಹಿಂದೆ ಹೊಗೆ ಸೊಪ್ಪಿನಮೇಲೆ ಆಗಲೇ ನಾವು ಎಕ್ಸೈಜ್ ಡ್ಯೂಟಿ ಯನ್ನು ಹಾಕಿದ್ದೇವೆ. ಆದಾದನಂತರ ಬೀಡಿ; ಸಿಗ ರೇಟುಗಳಮೇಲೆ ಒಂದು ಸ್ಪೆಷಲ್ ಟ್ಯಾಕ್ಸನ್ನು ಬೇರೆ ಹಾಕಿದ್ದೇವೆ. ಮದ್ರಾಸ್ ಸರ್ಕಾರದವರು ಅಲ್ಲಿ ಇವುಗಳಮೇಲೆ ತೆರಿಗೆ ಹಾಕಿದ್ದಾರೆಂದು ನಾವೂ ಸಹ ಇಲ್ಲಿ ಈ ಬೀಡಿ, ಸಿಗರೇಟುಗಳಮೇಲೆ ತೆರಿಗೆಯನ್ನು ವಿಧಿಸಿದ್ದರಿಂದ ಎಂಟು ಆಣೆ, ಆರು ಆಣೆ ಇದ್ದಂಥ ಸಿಗರೇಟ್ ಪ್ಯಾಕುಗಳ ಬೆಲೆ ಒಂದು ರೂಪಾಯಿಗೆ ಏರಿತು. ಇಷ್ಟೆಲ್ಲಾ ಆದನಂತರ ಪುನಃ ಇವುಗಳ ಮೇಲೆ ಸೇಲ್ಸ್ ಟ್ಯಾಕ್ಸ್ ಎಂದು ಬೇರೆ ಇನ್ನೊಂದು ತೆರಿಗೆ ವಿಧಿಸಲಾಯಿತು. ಈ ದಿವಸ ಪುನಃ ಮಾನ್ಯ ಮಂತ್ರಿಗಳು ಮತ್ತೊಂದು ತೆರಿಗೆ ಮಸೂದೆಯನ್ನು ಈ ದಿವಸ ತಂದಿದ್ದಾರೆ. ಆ ಸೇಲ್ಸ್ ಟ್ಯಾಕ್ಸ್ ತೆರಿಗೆ ಎನ್ನುವುದೂ ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಚರ್ಚೆ ಯಾಗಿ ಮೊನ್ನೆತಾನೆ ಜಾರಿಗೆ ಬಂದಿದೆ. ಆ ದಿವಸ ನೇಮಕಮಾಡಲಾಗಿದ್ದ ತೆರಿಗೆ ಸಮಿತಿಯವರು ಈ ಬೀಡಿ ಕೈಗಾರಿಕೆಗೆ ಸರಿಯಾದ ಉತ್ತೇಜನ ಕೊಡ ಬೇಕೆಂದು ಹೇಳಿರುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳಿದ ಆ ಸಮಿತಿ ಯಾವುದು ?

ಶ್ರೀ ಜೆ. ಮಹಮುದ್ ಇಮಾಂ.—ನಾನು ಹೇಳಿದ್ದು ಆ ನಿಮ್ಮ ಸೇಲ್ಸ್ ಟ್ಯಾಕ್ಸ್ ಸಮಿತಿ. The fact is there.

Sri Kadidal MANJAPPA.—It is an incorrect statement. The Committee did not meddle with the levy with regard to beedi.

ಶ್ರೀ ಜೆ. ಮಹಮ್ಮದ್ ಇಮಾಂ.—ಹೀಗೆ ಟ್ಯಾಕ್ಸ್ ಹಾಕಿ ಎಂದು ಅವರೇನೂ ಹೇಳಲಿಲ್ಲ. ಇದೊಂದು ಲೋಕಲ್ ಇಂಡಸ್ಟ್ರಿಯಂತಿದ್ದು ಸಂಸ್ಥಾನಾಮುಳೆ ಸುಮಾರು 50 ಸಾವಿರ ಜನಗಳಿಗೆ ಇದೊಂದು ಗೃಹ ಕೈಗಾರಿಕೆಯಾಗಿರುತ್ತದೆ. ಈ ದಿವಸ ಅನೇಕ ಬಡ ಸಂಸಾರಗಳು ಮೈಸೂರು ನಗರ, ಬೆಂಗಳೂರು ನಗರ, ದಾವಣಗೆರೆ—ಶಿರಾ ಇತ್ಯಾದಿ ಸ್ಥಳಗಳಲ್ಲಿ ತಮ್ಮ ಜೀವನೋಪಾಯವನ್ನು ಈ ಒಂದು ಕಸಬಿ ನಿಂದ ನಡೆಸಿಕೊಂಡು ಬರುತ್ತಿವೆ. ಹೀಗೆ ಸಂಸ್ಥಾನದ ನಾನಾ ಭಾಗಗಳಲ್ಲಿ ಈ ಕಸುಬು ಜನರ ಜೀವನಾ ಧಾರವಾಗಿದೆ. ಮೊಟ್ಟಮೊದಲನೆಯದಾಗಿ ಈ ಬೀಡಿ ಗಳಮೇಲೆ ಒಂದು ಹೈ ತೆರಿಗೆಯನ್ನು ಹಾಕಿದರು. ಆದಾಗ್ಯೂ ಆ ಕಾನೂನು ಇಲ್ಲಿಯವರೆಗೂ ಇನ್ನೂ ಜಾರಿಗೆ ಬಂದೇ ಇರಲಿಲ್ಲ. ಅದು ಇನ್ನೂ ಮೊನ್ನೆ ತಾನೆ effectಗೆ ಕೊಟ್ಟರು. ಅಂತು ಈ ಒಂದು ಕಾನೂನು ತೆರಿಗೆ ವಿಧಿಸಬೇಕೆಂಬ ಆಕ್ಟನ್ನು ಬಹಳ ಕಷ್ಟ ಪಟ್ಟು ಜಾರಿಗೆ ತಂದರು. ಆದರೆ ಹೀಗೆ ಜಾರಿಗೆ ತಂದ ಕಾನೂನು ಯಾವ ರೀತಿ ಕೆಲಸ ಮಾಡುತ್ತಿದೆ, ಇದರಿಂದ ಸಾಧಕ ಬಾಧಕಗಳೇನುಂಟಾಗಿವೆ ಎಂಬು ದನ್ನು ಇನ್ನೂ ಪರಿಷ್ಕಾರ ಮಾಡಿ ನೋಡಬೇಕೆಂದಿರು ವಾಗಲೇ ಅದಕ್ಕೆ ಈಗ ಪುನಃ ಮತ್ತೊಂದು ಅಮೆಂಡ್ ಮೆಂಟನ್ನು ತಂದಿದ್ದಾರೆ.

It is an inconsistent policy. This is to be very much condemned. Any Act should be given a fair trial.

ಹೀಗೆ ಯಾವುದಾದರೊಂದು ಮಸೂದೆಯನ್ನು ಸ್ಟ್ಯಾಚ್ಯೂಟ್ ಬುಕ್ಕಿನಲ್ಲಿ ತರುವಾಗ ಅದಕ್ಕೆ ಸಾಕಷ್ಟು ಅವಕಾಶ ಕೊಟ್ಟು ಅದಕ್ಕೆ ಒಂದು ಫೇರ್ ಟ್ರಯಲ್ ಕೊಡದೆಯೇ, ಆ ಆಕ್ಟ್ ಸಂಪೂರ್ಣವಾಗಿ ಜಾರಿಗೆ ಬಾರದಿದ್ದಾಗ್ಯೂ ತಾವು ಹೀಗೆ ಆ ಆಕ್ಟಿಗೊಂದು ತಿದ್ದುಪಡಿ ತರುವುದು ಯಾವ ನ್ಯಾಯ ! ಜನರಿಗೆ ಈ ಆಕ್ಟಿನಿಂದ ಏನಾದರೂ ಸುಖವಾಗಿದೆಯೇ ಅಥವಾ ಕಷ್ಟವಾಗಿದೆಯೇ ಎನ್ನುವುದೊಂದನ್ನೂ ನೋಡದೆ ಕೇವಲ ಆಕ್ಟ್ ಜಾರಿಗೆ ಬಂದ ಒಂದು ತಿಂಗಳ ಅವಧಿ ಯೊಳಗಾಗಿಯೇ ಮತ್ತೊಂದು ಅಮೆಂಡ್‌ಮೆಂಟನ್ನು ತಂದಿದ್ದಾರೆ!

ಈ ನಮೂನೆಯ ಆಕ್ಟ್ ಮದ್ರಾಸಿನಲ್ಲಿ ಜಾರಿಗೆ ಬಂದಿದೆ, ಬೊಂಬಾಯಿ ಪ್ರಾಂತ್ಯದಲ್ಲಿ ಜಾರಿಗೆ ಬಂದಿದೆ, ಎಂದು ಹೇಳಿರುತ್ತಾರೆ. ಈ ಒಂದು ಕಾರಣ ಹೇಳಿ ಇದನ್ನು ಇಲ್ಲಿಯೂ ಜಾರಿಗೆ ತರಲಾಗಿದೆ ಎಂದು ಈ ಮಸೂದೆಯಲ್ಲಿ ಹೇಳಿದ್ದಾರೆ. Have you not got your own independent policy, your own independent discretion ? You must judge it from the point of view of your own State.

ಅದನ್ನೆಲ್ಲಾ ಕೈಬಿಟ್ಟು ಈಗ ಬರಿ ಮದ್ರಾಸ್ ವಿಚಾರ ಒಂದನ್ನು ಮಾತ್ರ ಹೇಳಿದ್ದಾರೆ. ಹೀಗೆ ಮಾಡಿದರೆ ತಾವೇನೂ ಬೃಹಸ್ಪತಿಗಳೆಂದು ಹೇಳಿಸಿ ಕೊಳ್ಳಲಾರಿರಿ. ಈಗ ನಮ್ಮ ಸೀಮೆಯ ಸುತ್ತ ಮುತ್ತಲೂ ಇರತಕ್ಕ ಹೈದರಾಬಾದ್ ಮತ್ತು

(ಶ್ರೀ ಜೆ. ಮಹಮ್ಮದ್ ಇಮಾಂ.)

ಬೊಂಬಾಯಿ ಇತ್ಯಾದಿ ಪ್ರಾಂತ್ಯಗಳಲ್ಲಿರತಕ್ಕಂಥ ಟ್ಯಾಕ್ಸ್ ಪಾಲಸಿಯನ್ನು ತಾವು ಅನುಸರಿಸಿದಮೇಲೆ ಆ ಪ್ರಾಂತ್ಯ ಸರ್ಕಾರಗಳು ಅನುಸರಿಸುತ್ತಿರುವಂಥ ಇತರ ನೀತಿಗಳನ್ನೂ ಕೂಡ ನಮ್ಮ ಸರ್ಕಾರ ಏಕೆ ಅನುಸರಿಸಬಾರದು ? Bombay people, I think, are a very sympathetic people. ಈ ತೆರಿಗೆಯನ್ನು ಬೊಂಬಾಯಿ ಮತ್ತು ಹೈದರಾಬಾದಿನಲ್ಲಿ ಏಕೆ ಹಾಕಲಿಲ್ಲ ? ಬೊಂಬಾಯಿನಿಂದ ಇಲ್ಲಿಗೆ ಬೀಡಿ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ. ಈ ದಿವಸ ಆ ಸರ್ಕಾರಗಳೊಂದೂ ಇಂಥ ತೆರಿಗೆ ಹಾಕಿರುವುದಿಲ್ಲವಾದ್ದರಿಂದ ಮದ್ರಾಸ್ ಪ್ರಾಂತ್ಯವೊಂದನ್ನು ಈಗ ಉದಾಹರಣೆಗಾಗಿ ತಿಳಿಸಿದ್ದಾರೆ. ನಾಳೆ ಒಂದುವೇಳೆ ಇಂಥ ತೆರಿಗೆಯನ್ನು ಈ ಮದ್ರಾಸು ಸರ್ಕಾರವಾಗಲಿ ಅಥವಾ ಬೊಂಬಾಯಿ ಸರ್ಕಾರವೇ ಆಗಲಿ ಅಥವಾ ಹೈದರಾಬಾದ್ ಸರ್ಕಾರವೇ ಆಗಲಿ ವಿಧಿಸದೆ ಇದ್ದಾಗ್ಯೂ—ಕುಂಭಕೋಣದಲ್ಲಿ ಒಂದು ತೆರಿಗೆ ವಿಧಿಸಿದ್ದಾರೆ ಅಂದರೆ ಆಗ ನೀವೂ ಕೂಡ ಆ ತೆರಿಗೆಯನ್ನು ಇಲ್ಲಿ ಹಾಕಬಹುದಲ್ಲ ! ಹೀಗೆ ಮಾಡುತ್ತಾ ಹೋದರೆ 'ದಪ್ಪನೆ ಮನುಷ್ಯರನ್ನು ಹಿಡಿದು ಶೂಲಕ್ಕೆ ಹಾಕಿ' ಎಂದು ಹೇಳಿದಹಾಗಾಗುತ್ತದೆ\

This is not the kind of policy that should be adopted by the Government. Any Act that has been brought into vogue must be given a fair trial. Even without giving it a fair trial, they want to enhance the tax. ಹಾಗಾದರೆ ನಾಳೆಯ ದಿವಸ ತಾವು ಒಂದೊಂದು ಸರ್ಕಾರದ ಒಂದೊಂದು ಉದಾಹರಣೆ ಹೇಳಿ ಎಲ್ಲ ವಸ್ತುಗಳ ಮೇಲೂ ತೆರಿಗೆಹಾಕಿಬಿಡಿ. ಪ್ರತಿಯೊಂದು ಸ್ಟೇಟಿನವರೂ ಒಂದೊಂದು ವಸ್ತುಗಳಮೇಲೆ ತೆರಿಗೆ ಹಾಕಿಯೇ ಹಾಕಿರುತ್ತಾರೆ. ಮದ್ರಾಸಿನಿಂದ ನಮ್ಮ ಸ್ಟೇಟಿಗೆ ಬೀಡಿಗಳೇನೂ ಅಷ್ಟು ಹೆಚ್ಚಿಗೆ ಬರುವುದಿಲ್ಲ. ನಮ್ಮ ಸಂಸ್ಥಾನದಲ್ಲಿ ಈ ತೆರಿಗೆಯಿಂದ ಈ ವ್ಯಾಪಾರವೇ ಹಾಳಾಗಿಹೋಗುತ್ತದೆ. ಇದೆಲ್ಲಾ ಒಂದು ಮುಖ್ಯವಾದಂಥ ಬಡವರ ಕಸುಬು. ಆದರೆ ಈ ಕಸುಬಿನ ಪುರೋಭಿವೃದ್ಧಿಗೆ ತಾವೇನು ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ ? ಹೀಗೆಲ್ಲಾ ಮಾಡುವುದರಿಂದ ನಮ್ಮ ಸೀಮೆಯಲ್ಲಿ ಈ ಕೈಗಾರಿಕೆ ಬಿದ್ದುಹೋಗುತ್ತದೆಯೆ ಹೊರತು ಹೊರಗಡೆಯಿಂದ ಯಾರೂ ಇದನ್ನು ಅಷ್ಟಾಗಿ ತರಿಸುವುದಿಲ್ಲ. ತಾವು ಇಲ್ಲಿ ಇದರ ಅಭಿವೃದ್ಧಿಗಾಗಿ ಏನುಮಾಡಿದ್ದೀರಿ ? ಅಲ್ಲಿಂದ ಬೀಡಿಗಳನ್ನು ತಂದು ತಂದು ಇಲ್ಲಿ ಡಂಪ್ ಮಾಡಿಬಿಡುತ್ತಾರೆಂದು ಹೇಳುತ್ತಿದ್ದಾರೆ. ಹಾಗೆ ಹೊರಗಡೆಯಿಂದ ಈ ದಿವಸ ಬೀಡಿ ಎಲ್ಲಿಂದ ಬರುತ್ತದೆಯೆಂದರೆ ಮಂಗಳೂರು ಮತ್ತು ಕಾಳಹಸ್ತಿ, ಇತ್ಯಾದಿ ಎರಡು ಮೂರು ಕಡೆಗಳಿಂದ ಬಂದರೆ ಹೆಚ್ಚಾಯಿತು. ಆದರೆ ಹಾಗೆ ಏತಕ್ಕಾಗಿ ಅಲ್ಲಿಂದ ಬೀಡಿಗಳನ್ನ ಜನ ತರಿಸುತ್ತಿದ್ದಾರೆ ? \ ಅದಕ್ಕೆ ಕಾರಣವಿಷ್ಟೆ. ಇಲ್ಲಿ ಬೀಡಿ ಕಟ್ಟತಕ್ಕಂಥ ಜನಗಳ ಸಂಖ್ಯೆ ಕಡಿಮೆ. ಮತ್ತು ಈ ಬೀಡಿಸುತ್ತಲು ಬೇಕಾದ ತೂಬರೆ ಎಲೆ ಹೊರಗಡೆಯಿಂದಲೇ ಬರಬೇಕಾಗಿವೆ. ಹೊರಗಡೆಯಿಂದ ಈ ಸಾಮಾನುಗಳನ್ನು ತರಿಸಿ ಇಲ್ಲಿ ತಂಬಾಕು ತಯಾರು ಮಾಡಿ ಬೀಡಿ ಸುತ್ತಬೇಕಾದರೆ ಇವುಗಳ cost of production ಜಾಸ್ತಿಯಾಗುತ್ತದೆ. ಹೊರಗಡೆಯವರಿಗೆ ಈ cost of production ಬಹಳ ಕಮ್ಮಿ ಯಾಗಿರುತ್ತದೆ. ಹೀಗಾಗಿ ಇತರ ಎಲ್ಲಾ ದೇಶದವರ ಸಾಮಾನುಗಳಮೇಲೆ ಪೈಪೋಟಿ ಮಾಡಲು ಅವರಿಗೆ ಬೇಕಾದಹಾಗೆ ಅವಕಾಶವಿದೆ. ಅವರಿಗೆ ಯಾವಭಾಗದಲ್ಲೂ ಲುಕ್ಸಾನಾಗಲು ಅವಕಾಶವಿಲ್ಲ. ಅವರ ಮೇಲೆ ಒಂದುವೇಳೆ ಅಲ್ಲಿನ ಸರ್ಕಾರ ತೆರಿಗೆ ಹಾಕಿದರೂ ಅವರು ತೆರುವ ಚೈತನ್ಯವನ್ನು ಹೊಂದಿದ್ದಾರೆ. ಹೀಗಾಗಿ ನಮ್ಮ ಸರ್ಕಾರ, ಈ ದಿವಸ ಅವರು ಅಲ್ಲಿ ತೆರಿಗೆ ಹಾಕಿದ್ದಾರೆ, ಆದುದರಿಂದ ನಾವೂ ಸಹ ಇಲ್ಲಿ ತೆರಿಗೆ ಹಾಕಬೇಕೆಂಬ ಮನೋಭಾವವನ್ನಿಟ್ಟುಕೊಂಡಿರುವುದನ್ನು ನೋಡಿದರೆ, ಅಲ್ಲಿ ಅವರಿಗೆ ಒಂದು ಕಣ್ಣು ಹೋಗಿರುವುದರಿಂದ ಇಲ್ಲಿ ನಮ್ಮ ಎರಡು ಕಣ್ಣುಗಳೂ ಹೋಗಲಿ ಎಂದು ಹೇಳಿದಹಾಗಾಯಿತು. ನಮ್ಮ ದೇಶದಲ್ಲಿ ಈ ಕೈಗಾರಿಕೆಯಿರುವುದೆಲ್ಲಾ ಬಹಳ ಕಮ್ಮಿ ಪ್ರಮಾಣದಲ್ಲಿದೆ. ತಾವು ಹೇಳುವಂತೆ ಬೇಕಾದರೆ ಹೊರಗಡೆಯಿಂದ ನಮ್ಮ ಮೈಸೂರು ಸೀಮೆಗೆ ಬರತಕ್ಕ ಬೀಡಿಗಳನ್ನು ತಡೆಗಟ್ಟಿ, ಇಲ್ಲಿನ ಕೈಗಾರಿಕೆಯನ್ನು ಅಭಿವೃದ್ಧಿಗೆ ಬರುವಂತೆ ಮಾಡಿರಿ. It is an inevitable evil which you cannot avoid. ಹೀಗೆ ಇದರ ಉತ್ಪನ್ನ ಜಾಸ್ತಿ ಆದರೆ, they can effectively check the inflow of the beedis coming from other States. ಆಗ ತಾವು ಇದರಮೇಲೆ ಬೇಕಾದರೆ ಮೂರು ಕಾಸು ತೆರಿಗೆ ಹಾಕಿದರೂ ಪರವಾಇಲ್ಲ. ಹಾಗೆ ಮಾಡದೆ, 'Penny wise pound foolish' ಅನ್ನುವಂತೆ ಮಾಡಬಾರದು. ಇದರಿಂದ ತಮ್ಮ ಲೆಕ್ಕಾಚಾರವೇನೇ ಇರಲಿ ಒಂದು ಲಕ್ಷಕ್ಕೆ ಮೇಲ್ಪಟ್ಟು ವರಮಾನ ಬರಬಾರದು. ಆದರೆ ಈ ಉದ್ಯೋಗದಲ್ಲಿ ಈ ದಿವಸ 50-60 ಸಾವಿರ ಜನರು ತೊಡಗಿದ್ದಾರೆ. ಹೀಗೊಂದು ತೆರಿಗೆ ವಿಧಿಸುವ ನೆಪದಿಂದ ಇಷ್ಟೊಂದು ಜನಗಳ ಜೀವನಕ್ಕೆ ತಾವು ಧಕ್ಕೆ ಉಂಟುಮಾಡುವಂಥ ಒಂದು ಪ್ರಯತ್ನಕ್ಕೆ ಕೈಹಾಕುತ್ತಿದ್ದೀರಿ. ತಮ್ಮ ಪ್ರಯತ್ನ ಈ ಸ್ಥಳೀಯ ಕೈಗಾರಿಕೆಗೆ ಕಲ್ಲುಹಾಕಿ ಹೊರಗಡೆಯ ಕೈಗಾರಿಕೆಗೆ ಉತ್ತೇಜನ ಕೊಟ್ಟಂತೆ ಇದೆ. ಇರತಕ್ಕಂಥ ವಾಸ್ತವಾಂಶಗಳನ್ನು ಹೇಳಿದರೆ ನಮ್ಮ ಕೆಲವು ಸ್ನೇಹಿತರು ಅಪಪ್ರಚಾರ ಮಾಡುತ್ತೀರಿ ಎಂದು ಹೇಳುತ್ತಾರೆ. ಹಾಗೆ ಅವರು ಯಾವಾಗಲೂ ಒಂದ ಸ್ಲೋಗನನ್ನು ಹೇಳುವುದು ಅವರ ಅಭ್ಯಾಸವಾಗಿಹೋಗಿದೆ. ಅವರ ನೀತಿಯೇನೆಂಬುದರ ಬಗ್ಗೆ ಯಾರೇನೂ ಪ್ರಚಾರ ಮಾಡಬೇಕಾದ್ದಿಲ್ಲ. ಈ ವರೆಗೆ ಅವರು ವಿಧಿಸಿರುವ ಸುಮಾರು 32 ತೆರಿಗೆಗಳೇ ಅವರ ನೀತಿ-ನಿಯಮಗಳನ್ನು ಪ್ರಚಾರ ಮಾಡುತ್ತಿವೆ. ಹಾಗೆ ಆ ಒಂದು ನಿಂದನೆಯಿಂದ ತಮ್ಮನ್ನು ಮರೆಮಾಡಿಕೊಳ್ಳಲು ಅವರು ನಮ್ಮಗಳ ಮೇಲೆ ಅಪಪ್ರಚಾರ ಮಾಡುತ್ತಿದ್ದಾರೆ. ಯಾವ ಪಾರ್ಟಿಗೆ ಅಪಪ್ರಚಾರ ಮಾಡಬೇಕು, ಯಾವ ಪಾರ್ಟಿಯಮೇಲೆ ಅಪಪ್ರಚಾರ ಮಾಡಬಾರದೆಂಬುದನ್ನು ಈ ಸರ್ಕಾರ ವಿಧಿಸಿರತಕ್ಕ ತೆರಿಗೆಗಳೇ ಹೇಳುತ್ತಿವೆ. ಈಗ ನಾನು ನಮ್ಮ ಸರ್ಕಾರದವರಿಗೆ ತಿಳಿಸಬೇಕಾಗಿರುವುದೇನೆಂದರೆ ಈಗ ಅವರು ತಂದಿರುವ ತಿದ್ದುಪಡಿಯನ್ನು ಜಾರಿಗೆ ಕೊಡುವುದು ಏನೂಬೇಕಾಗಿಲ್ಲ. ಈಗಾಗಲೇ ನಾವು ಈ ಸಾಮಾನುಗಳ ಮೇಲೆ ಒಂದು ರೂಪಾಯಿಗೆ ಒಂದು ಕಾಸಿನಂತೆ ಹಾಕಿರುವ ತೆರಿಗೆ ಏನಿದೆಯೋ ಅದನ್ನೇ ಟ್ರೈಮಾಡಿ ನೋಡೋಣ. ಈ ದಿವಸ ಹೊರಗಡೆಯಿಂದ ನಮ್ಮ ಸ್ಟೇಟಿಗೆ ಎಷ್ಟು ಬೀಡಿ ಬರುತ್ತದೆ ಅನ್ನುವುದರ ಬಗ್ಗೆ ನಮ್ಮ ಸರ್ಕಾರದಲ್ಲಿ ಯಾವ ಅಂಕಿ ಅಂಶಗಳೂ ಇರುವುದಿಲ್ಲ. ಈಗಾಗಲೇ ನಾವು ವಿಧಿಸಿರುವ ತೆರಿಗೆಯಿಂದ ನಮ್ಮ ಸೀಮೆಗೆ ಹೊರಗಡೆಯಿಂದ ಬರತಕ್ಕಂಥ ಬೀಡಿಗಳು ಜಾಸ್ತಿಯಾಗುತ್ತದೆಯೇ ಅಥವಾ ನಮ್ಮ ಈ

ಲೋಕಲ್ ಇಂಡಸ್ಟ್ರಿ ಕಡಿಮೆಯಾಗುತ್ತದೆಯೋ ಏನು ಎನ್ನುವುದನ್ನು ನೋಡದೆ ಈಗ ಏಕಾಏಕಿ ಇದನ್ನು ಬದಲಾಯಿಸುವುದು ನ್ಯಾಯವಾದದ್ದಲ್ಲ. ಇಷ್ಟೇ ಅಲ್ಲದೆ ನಮ್ಮ ಸರ್ಕಾರವನ್ನು ನಡೆಸತಕ್ಕಂಥ ಪಾರ್ಟಿಯವರು ತಾವು ಯಾವಾಗ್ಲೂ ಬಡವರ ಸ್ನೇಹಿತರೆಂದು ಬೇರೆ ಹೇಳಿಕೊಳ್ಳುತ್ತಿದ್ದಾರೆ. ಹಾಗೆ ಹೇಳಿಕೊಂಡು ಅವರು ಆ ಬಡವರನ್ನೆಲ್ಲಾ ಹೀಗೇನೊ ಉದ್ಧಾರ ಮಾಡುವುದು ? ಹೀಗೆ ಮಾಡಿದರೆ ನಮ್ಮ ಸೀಮೆಯಲ್ಲಿರತಕ್ಕ ಬಡತನವನ್ನು ಹೇಗೆ ಹೋಗಲಾಡಿಸುತ್ತಾರೆ ? ರಸ್ತೆಯಲ್ಲಿ ಡಬ್ಬದ ಪೆಟ್ಟಿಗೆ ಹೊತ್ತುಕೊಂಡು 'ಬೊಂಬಾಯಿ ಮದ್ರಾಸ್‌ನೋಡಿ' ಎಂದು ಹೇಳುತ್ತಿದ್ದಾರಲ್ಲಾ ಅವರ ಹಾಗೆ ಇವರೂ ಸಹ ಅಂಗೈಯ್ಯಲ್ಲೇ ಕೈಲಾಸ ತೋರಿಸುತ್ತೇವೆ, ವೈಕುಂಠ ತೋರಿಸುತ್ತೇವೆ, ಈಶ್ವರನನ್ನೇ ತೋರಿಸುತ್ತೇವೆ ಎಂದು ಪ್ರಚಾರಗಳನ್ನು ಮಾಡಿರುತ್ತಾರೆ. ಆದರೆ ಈ ಕೈಗಾರಿಕೆ ನಮ್ಮ ಬಡ ಜನರಿಗೆ ಬಹಳ ಅಗತ್ಯವಾಗಿ ಬೇಕಾದುದಾಗಿದೆ. ಇದು ಬಡವರ ಕೈಗಾರಿಕೆ. ಈ ಕಸಬಿನಿಂದ ಈ ದಿವಸ ಅನೇಕ ಬಡಸಂಸಾರಗಳು ತಮ್ಮ ಜೀವನವನ್ನು ನಡೆಸಿಕೊಳ್ಳುತ್ತಿವೆ. ಹೀಗಿರುವಾಗ ತಾವು ಏಕ್‌ದಂ ತೆರಿಗೆ ಜಾಸ್ತಿ ಮಾಡಿದರೆ ಅವರೆಲ್ಲರಿಗೂ ತುಂಬ ತೊಂದರೆಯಾಗುತ್ತದೆ.

4 P.M.

Only poor people use beedis. ಹೋದ ವರ್ಷ ಸಿಗರೇಟಿಗೆ ಆರು ಆಣೆ ತೆರಿಗೆ ಹಾಕಿದಾಗ Chief Minister ಇಮಾಂ ಸಾಹೇಬರಿಂದ ಆರು ಆಣೆ ಹೆಚ್ಚಾಗಿ ವಸೂಲು ಮಾಡುತ್ತಾರೆಂದು ತಿಳಿಸಿದರು. ಅದಕ್ಕೆ ನಾನು ಹೇಳಿದೆ, ಸಿಗರೇಟು ಬೇಡ, ಬೀಡಿ ಸಾಕು ಎಂದು. ಸಿಗರೇಟಿನ ಮೇಲೆ ತೆರಿಗೆ ಹಾಕಿದಮೇಲೆ ಬೀಡಿ ವ್ಯಾಪಾರ ವಿಪರೀತವಾಗಿದೆ. ಇದು ಬಹಳ ಬಡವರ ಮೇಲೆ ಬೀಳುವ ತೆರಿಗೆ. ಆದ್ದರಿಂದ ಇದನ್ನು ಇಷ್ಟು light hearted ಆಗಿ ಮಾಡಬೇಡಿ. ಕೆಲವು ವರ್ಷಗಳು ಈಗ ಇರುವಂತೆ ನಡೆಯಲಿ. ಅನಂತರ ಸಾಧಕ ಬಾಧಕಗಳನ್ನು ನೋಡೋಣ. ಈಗ ಪ್ರಸಕ್ತ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಲಿ, ಇದು Money Bill ಆದುದರಿಂದ Highness approval ಬೇಕು.

ಅಧ್ಯಕ್ಷರು.—ಬಂದಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಎರಡನೆಯದು; ಸರ್ಕಾರದವರು ಇಂತಹ ಮುಖ್ಯವಾದ ಬಿಲ್ಲನ್ನು tail end of the sessionನಲ್ಲಿ ತರುವುದು ಸರಿಯಲ್ಲ. ಇಂತಹ Money Bill ಮೊದಲು ಬರಬೇಕು. Shall I call it a ruse or a trick adopted by the Government to hustle through this Bill now ? Why did they not bring it at the beginning ?

Sri Kadidal MANJAPPA.—What difference does it make ?

ಶ್ರೀ ಜೆ. ಮಹಮ್ಮದ್ ಇಮಾಂ.—ಒಂದು programme ಪ್ರಕಾರ ನಡೆಯುವುದಿಲ್ಲ. ಇದನ್ನು ನಾವು study ಮಾಡಿಲ್ಲ. ಈಗ pass ಮಾಡಿ ಎಂದು ಹೇಳುತ್ತೀರಿ. ತಮಗೆ brute majority ಇದೆ, ಪಾಸ್ ಮಾಡುತ್ತೀರಿ. ಇಂತಹ Money Bill ಗಳಿಗೆ sufficient time ಕೊಡಬೇಕು. ಜನರಿಗೆ intimation ಕೊಡಬೇಕು. ಅವರು ಬಂದು represent ಮಾಡುವ ಹಾಗೆ ಇರಬೇಕು. It is a popular Government. The Government must consult the Profession. ಬೀಡಿ Manufacturers, Representativeಗಳನ್ನು ಕರೆಸಿ ಅವರಿಗೆ ಏನು ತೊಂದರೆಗಳಾಗುತ್ತವೆ ಎಂಬುದನ್ನು ತಿಳಿದು ಮುಂದುವರಿಸಿದರೆ ಉತ್ತಮ. ಆದರೆ ಒಬ್ಬರನ್ನೂ ಈ ವಿಷಯ ಕೇಳುವುದಿಲ್ಲ. ಎಂದೋ ಒಂದು ದಿವಸ ಬಿಲ್ಲನ್ನು ಮಾಡುವುದು, ಇಲ್ಲಿ ಕುಳಿತು ಕೊಂಡು ಪಾಸ್‌ಮಾಡಿ ಎಂದು ಹೇಳುವುದು. ಅವರ representativeಗಳನ್ನು ಕೇಳೋಣ ಎಂದರೆ ನಮಗೆ ಸಮಯವಿಲ್ಲವೆಂದು ಹೇಳುವುದು. So they are simply hustling through an important measure which they are going to make permanent in the State. Before it is given a trial, ಶೇಕಡ 3⅛ ಕೊಡಬೇಕು ಎಂದು ಹೇಳುತ್ತಾರೆ. Local industriesಗೆ encourage ಮಾಡಬೇಕು ಎಂದು ಹೇಳುವ ತತ್ವಕ್ಕೆ ಇದು ಸರಿಹೊಂದುವುದಿಲ್ಲ. Let them fix a slab rate according to the turnover. ವ್ಯಾಪಾರ 10 ಸಾವಿರದಿಂದ 30 ಸಾವಿರದ ರೂಪಾಯಿಗಳವರೆಗೆ ಇದ್ದರೆ ಆಗ 1 ರೂಪಾಯಿಗೆ 1 ಕಾಸು ತೆರಿಗೆ ಹಾಕಬಹುದು.

But if it is a company like Ganesha Beedi Company and the turnover exceeds 1 lakh or 2 lakhs, let it be 3 pies. If it is 6 lakhs, let it be six pies. This will be an effective way of preventing import from other States. All the beedi manufacturers in our State are poor and their turnover does not exceed ten to fifteen thousand rupees. So, why don't you fix a slab rate system on the turnover basis ? If the turnover is one lakh and below, let the rate be one pie ; if it exceeds one lakh and less than three lakhs; 3 pies ; if it is above 3 lakhs, let it be 0-1-6. If you apply the same rate, whether it is a small or a big turnover, the persons whose turnovers are large will survive and all the small people will vanish. These matters should be thought over leisurely. My complaint is that the Government is very hasty; and, in their greed and enthusiasm to get as much money as possible, they hustle through and afterwards repent.

So, Sir, on this ground, I oppose this Bill.

ಶ್ರೀ ಕಡಿದಾಳ್ ಮಂಜಪ್ಪ.—ಅಧ್ಯಕ್ಷರೇ, ಈ ಮಸೂದೆಯ ಮೇಲೆ ಮಾತನಾಡಿದ ಮಾನ್ಯಸದಸ್ಯರ ಅಭಿಪ್ರಾಯಗಳನ್ನು ಬಹಳ ಎಚ್ಚರಿಕೆಯಿಂದ ಮತ್ತು ಕುತೂಹಲದಿಂದ ಕೇಳಿದ್ದೇನೆ. ತೆರಿಗೆ ಹಾಕುವಾಗ ಯಾರೇ ಆಗಲಿ. ತೆರಿಗೆಯನ್ನು ಕೊಡುತ್ತೇವೆಂದು ಮಸೂದೆಯನ್ನು ಸ್ವಾಗತಿಸಿ ಸಂತೋಷವಾಗಿ ಒಪ್ಪುವುದಿಲ್ಲ.

Sri K. PATTABHIRAMAN.—That is a stock argument. There is nothing new in it.

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಿಯೂ ಅನುಕೂಲ ಬೇಕು ಎಂದು ಹೇಳುವುದು stock argument ಎಂದು ಹೇಳುತ್ತೇನೆ. ಕೆರೆ ನಿರ್ಮಾಣದ ಪ್ರಶ್ನೆ ಬಂದಾಗ ಆ ತಾಲ್ಲೂಕಿಗೆ ಏನು ಮಾಡಿದ್ದಾರೆ, ಈ ತಾಲ್ಲೂಕಿಗೆ ಏನು ಮಾಡಿದ್ದಾರೆ ಎಂಬ ಪ್ರಶ್ನೆಗಳು ಸುರಿಮಳೆ ಆಗುತ್ತವೆ. ಕೆರೆಗಳ ಜೀರ್ಣೋದ್ಧಾರ ಪ್ರಶ್ನೆ ಬಂದಾಗ ಅಲ್ಲಿ ನಿಧಾನವಾಗುತ್ತದೆ, ಇಲ್ಲಿ ನಿಧಾನವಾಗುತ್ತದೆ ಎಂಬ ವಾದವನ್ನು ಮುಂದಿಡುತ್ತಾರೆ. ಕುಡಿಯುವ ನೀರಿನ ಭಾವಿಗಳನ್ನು ಹಳ್ಳಿಗಳ ಕಡೆ ಏರ್ಪಾಡು ಮಾಡುವುದಕ್ಕೆ ಸರ್ಕಾರದವರು ಲಕ್ಷ್ಯ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಸ್ಕೂಲುಗಳನ್ನು ಸಾಕಾದಷ್ಟು ಸಂಖ್ಯೆಯಲ್ಲಿ ಮಂಜೂರುಮಾಡಿಲ್ಲ ಎಂದು ನಾನಾ ರೀತಿಯಲ್ಲಿ ಸರ್ಕಾರದವರು ಕರ್ತವ್ಯಲೋಪವನ್ನು ಮಾಡಿದ್ದಾರೆಂದು ವಾದವನ್ನು ಹೂಡುತ್ತಾರೆ. ಆದರೆ ತೆರಿಗೆ ಹಾಕುವ ಪ್ರಶ್ನೆ ಬಂದಾಗ್ಯೆ ತೆರಿಗೆಯಿಂದ ಬಡವರಿಗೆ ತೊಂದರೆಯಾಗುತ್ತದೆ, ಬೀಡಿ ಸೇದುವವರಿಗೆ ತೊಂದರೆಯಾಗುತ್ತದೆ, ಕೆಲಸ ಮಾಡುವವರಿಗೆ ತೊಂದರೆಯಾಗುತ್ತದೆ, ಬೀಡಿ ತಯ್ಯಾರುಮಾಡುವವರಿಗೆ ತೊಂದರೆಯಾಗುತ್ತದೆಂದು ಮುಂತಾಗಿ ವಾದ ಮಾಡುತ್ತಾರೆ. ಹೀಗೆ ಬಡವರ ಹೆಸರನ್ನು ಉಪಯೋಗಿಸಿಕೊಂಡು ಪ್ರತಿಯೊಂದು ಸಂದರ್ಭದಲ್ಲೂ ಕೂಡ ವಾದಮಾಡುವುದು ಸರಿಯಲ್ಲ. ಶ್ರೀ ಎಸ್. ಗೋಪಾಲಗೌಡರು ಮತ್ತು ಇತರ ಮಿತ್ರರು ಈ ಮಸೂದೆಯನ್ನು ಸರ್ಕಾರದವರು ಜಾರಿಗೆ ತಂದರೆ ಕಾಂಗ್ರೆಸ್ ಪಕ್ಷಕ್ಕೆ ಬರತಕ್ಕ ಓಟಿನಲ್ಲಿ ಶೇಕಡ 25 ರಷ್ಟನ್ನು ಅವರು ಕಳೆದುಕೊಳ್ಳುತ್ತಾರೆಂದು ಹೇಳಿದರು. ಓಟಿಗೋಸ್ಕರವಾಗಿ ಕಾಂಗ್ರೆಸ್ ಪಕ್ಷದವರು ಕೆಲಸಮಾಡುತ್ತಾ ಇಲ್ಲ. ದೇಶದ ಸೌಖ್ಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ಓಟು ಬರಲಿ ಅಥವಾ ಬಾರದೆ ಇರಲಿ ಅವರು ಮಾಡತಕ್ಕ ಕೆಲಸವನ್ನು ನಿಷ್ಪಕ್ಷಪಾತವ್ವಾಗಿ ಮಾಡಬೇಕು ಎಂದು ಅವರು ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ ಎಂಬುದಾಗಿ ಅವರಿಗೆ ನಾನು ವಿನಯಪೂರ್ವಕವಾಗಿ ಅರಿಕೆಮಾಡಿಕೊಳ್ಳುತ್ತೇನೆ. 1948 ನೇ ಇಸವಿಯಿಂದ ಬೀಡಿಯಮೇಲೆ ಮಾರಾಟ ತೆರಿಗೆಯನ್ನು ವಿಧಿಸುತ್ತಿದ್ದೇವೆ. ಇದುವರೆಗೆ ರೂಪಾಯಿ ಒಂದಕ್ಕೆ ಮೂರುಕಾಸಿನ ತೆರಿಗೆಯನ್ನು ಬೀಡಿ ವ್ಯಾಪಾರಿಗಳು ಕೊಡುತ್ತಿದ್ದಾರೆ. ಕಳೆದ ವರ್ಷ ಈ sales-tax ಕಾನೂನನ್ನು ವಿಮರ್ಶೆಮಾಡುವುದಕ್ಕೋಸ್ಕರ ನನ್ನ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಕವಾಯಿತು. ಆ ಸಮಿತಿಯವರು ಬೀಡಿಯ ವಿಚಾರದಲ್ಲಿ ವಿಧಾಯಕ ಮಾಡಿದ ತೆರಿಗೆಯನ್ನು ಆಗ ಕಡಿಮೆಮಾಡಬೇಕು ವಜಾಮಾಡಬೇಕು ಎಂಬ ಸಲಹೆಯನ್ನು ಸರಕಾರದ ಮುಂದೆ ಇಟ್ಟಿರಲಿಲ್ಲ. ಆದರೆ ಈ ಸಮಿತಿಯ ಶಿಫಾರ್ಸುಗಳಿಗೆ ಅನುಸಾರವಾಗಿ ಮಸೂದೆ ತಯಾರಾಗಿ ಈ ಮಾನ್ಯ ಸಭೆಯ ಮುಂದೆ ಬಂದಾಗ ಕೆಲವು ಮಾನ್ಯಸದಸ್ಯರು ಮದ್ರಾಸಿನಲ್ಲಿ ಬೀಡಿಗೆ ಯಾವ ತೆರಿಗೆಯನ್ನೂ ಹಾಕಿಲ್ಲ, ಅಲ್ಲಿ ಬೀಡಿಗೆ ವಿನಾಯಿತಿ ಕೊಟ್ಟಿದ್ದಾರೆ, ಆದ್ದರಿಂದ ಇಲ್ಲಿ ತೆರಿಗೆಯನ್ನು ಹಾಕಿದರೆ ಮದ್ರಾಸಿನಿಂದ ಬರತಕ್ಕ ಬೀಡಿಯಿಂದ ಪೈಪೋಟಿಯನ್ನು ತಡೆಗಟ್ಟುವುದು ಕಷ್ಟವಾಗುತ್ತದೆ, ಈ ಕಾರಣದಿಂದ ಕಡಿಮೆಮಾಡಬೇಕೆಂದು ಹೇಳಿದರು. ಅದು ನಿಜವೆಂದು ನಂಬಿ ಸ್ಥಳದಲ್ಲಿ ಬೀಡಿ ತಯಾರುಮಾಡತಕ್ಕವರು ಸ್ವಲ್ಪ ಅನುಕೂಲ ಪಡೆದರೂ ಪಡೆಯಲಿ ಎಂದು ಸರ್ಕಾರದವರು ಒಂದು ಕಾಸು ತೆರಿಗೆ ಹಾಕುವುದನ್ನು ಒಪ್ಪಿಕೊಂಡರೂ ಈಗ ಮದ್ರಾಸ್ ಸರ್ಕಾರದವರು ಬೀಡಿಯಮೇಲೆ ರೂಪಾಯಿ ಆರು ಕಾಸಿನಂತೆ ತೆರಿಗೆಯನ್ನು ಹಾಕಬೇಕು ಎಂದು ತೀರ್ಮಾನಮಾಡಿ ಆ ಬಗ್ಗೆ ಶಾಸನಸಭೆಯ ಮಂಜೂರಾತಿಯನ್ನು ಪಡೆದಿದ್ದಾರೆ. ಮದ್ರಾಸಿನಲ್ಲಿ ರೂಪಾಯಿಗೆ ಆರ ಕಾಸಿನ ತೆರಿಗೆಯನ್ನು ಕೊಡುವುದನ್ನು ತಪ್ಪಿಸುವುದಕ್ಕೋಸ್ಕರ ಅಲ್ಲಿಯ ಬೀಡಿ ತಯಾರುಮಾಡತಕ್ಕವರು ಮತ್ತು ವರ್ತಕರು ಮೈಸೂರು ಮಾರ್ಕೆಟ್ ಚೆನ್ನಾಗಿದೆ ಎಂದು ಮೈಸೂರಿಗೆ ಬೀಡಿಯನ್ನು ರವಾನೆಮಾಡುವ ಅವಕಾಶವಿದೆ. ಇಲ್ಲಿಗೆ export ಮಾಡಿದರೆ ಅವರಿಗೆ ಹೇಗೆ ಅನುಕೂಲವಾಗುತ್ತದೆ ಎಂದು ಒಬ್ಬರು ಮಿತ್ರರು ಕೇಳಿದರು. ಒಂದುವೇಳೆ ಮಂಗಳೂರು ಬೀಡಿಯನ್ನು ಇಲ್ಲಿಗೆ direct ಆಗಿ export ಮಾಡಿದರೆ ಅವರು ಕೊಡತಕ್ಕದ್ದು ಒಂದು ಕಾಸು. ಒಂದು ಕಾಸು ತೆರಿಗೆಕೊಟ್ಟು ತಮ್ಮ ಮಾಲನ್ನು ಇಲ್ಲಿ ಬಿಕರಿಮಾಡುವುದು ಅನುಕೂಲವೆಂದು ಅವರು ಸ್ವಾಭಾವಿಕವಾಗಿ ಭಾವಿಸುತ್ತಾರೆ. ಅಲ್ಲಿ ಆರು ಕಾಸಿನ ತೆರಿಗೆ ಕೊಟ್ಟು ಮಾರಾಟಮಾಡುವ ಪೈಪೋಟಿ ಜಾಸ್ತಿಯಾಗುತ್ತಿದೆ ಎಂಬುದನ್ನು ಅವರು ಮರೆಯಬಾರದು. ಒಂದುವೇಳೆ ಒಬ್ಬರು dealer ಆಗಿದ್ದರೆ ಆರು ಕಾಸು ತೆರಿಗೆ ಕೊಟ್ಟು ಪುನಃ export ಮಾಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ. If he is an ordinary dealer who has already purchased goods from Mangalore, he will not venture to export goods into Mysore State after paying 6 pies in the rupee in Madras. ಕೆಲವು ಮಾನ್ಯಮಿತ್ರರು ಮೂರು ಕಾಸಿನ ಬದಲು ಆರು ಕಾಸನ್ನು ಹಾಕಬಹುದು ಎಂದು ಹೇಳಿದರು. ಒಂದು ಗುಟ್ಟನ್ನು ಹೇಳುವುದಾದರೆ, ಇಲಾಖೆಯವರು ಆರು ಕಾಸನ್ನು propose ಮಾಡಿದ್ದರು. ನಾನು ಯೋಚನೆಮಾಡಿಬಿಟ್ಟು ಮಂಗಳೂರು ಮತ್ತು ಇತರ ಕಡೆಗಳಿಂದ ಬೀಡಿ ಇಲ್ಲಿಗೆ ಬರುವಾಗ tax ಮೂರು ಕಾಸು ಹಾಕಿದರೆ ಆತನಿಗೆ ರವಾನೆ ಖರ್ಚು ಮತ್ತು tax ಸೇರಿ ಆರು ಕಾಸು ಬೀಳಬಹುದು ಮತ್ತು ನಮ್ಮ ಸ್ಥಳದಲ್ಲಿ ಬೀಡಿ ತಯಾರುಮಾಡತಕ್ಕವರಿಗೆ ಸ್ವಲ್ಪ ಅನುಕೂಲವಾಗಲಿ ಎಂದು ಆರು ಕಾಸನ್ನು ಹಾಕುವುದಕ್ಕೆ ಬದಲಾಗಿ ಮೂರು ಕಾಸು ಹಾಕಬೇಕೆಂದು ಯೋಚನೆಮಾಡಿದೆ. ಈಗ ನಡೆದಿರುವ ವಾದ ನೋಡಿದರೆ ನನ್ನ ಯೋಚನೆ ತಪ್ಪೇ ಎಂದು ಅನ್ನಿಸುತ್ತದೆ. ಮಾನ್ಯಮಿತ್ರರಾದ ಶ್ರೀ ಮುಲ್ಕ ಗೋವಿಂದರೆಡ್ಡಿಯವರಿಗೆ ಬಡವರ ಮೇಲೆ ಮತ್ತು ಬೀಡಿ ತಯಾರುಮಾಡತಕ್ಕ ಜನರಮೇಲೆ ಎಷ್ಟು ಮಮತೆ ಇದೆಯೋ ಅಷ್ಟೇ ಮಮತೆ ಈ ಕಡೆ ಇರತಕ್ಕ ಸದಸ್ಯರಿಗೂ ಇದೆಯೆಂದು ಅವರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಹೋದ ವರುಷ ಬೀಡಿ ಸಂಬಂಧವಾಗಿ ಇದೇ ವಾದವನ್ನು ಸರ್ಕಾರದ ಮುಂದೆ ಇಟ್ಟಿದ್ದರು. ಮದ್ರಾಸಿನಲ್ಲಿ ಬೀಡಿಗೆ ತೆರಿಗೆಯಿಲ್ಲ, ಇಲ್ಲಿ ನಾವು ತೆರಿಗೆ ಹಾಕಿದರೆ ಅವರ ಪೈಪೋಟಿ ತಡೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ, ಆದ್ದರಿಂದ ತೆರಿಗೆಯನ್ನು ವಜಾಮಾಡಿ ಎಂದು ಹೇಳಿದರು. ಈಗ ಮದ್ರಾಸಿನಲ್ಲಿ ತೆರಿಗೆ ಮೂರು ಕಾಸು ಅಲ್ಲ. ಆರು ಕಾಸನ್ನು ಹಾಕಿದ್ದಾರೆ. ಅನೇಕ ಮಾನ್ಯಸದಸ್ಯರಿಗೆ ಗೊತ್ತಿರುವಂತೆ ಮೈಸೂರಿನಲ್ಲಿ ಖರ್ಚಾಗತಕ್ಕ ಬೀಡಿಗಳು ಬಹು ಪ್ರಮಾಣದಲ್ಲಿ ಬೇರೆಕಡೆಗಳಿಂದ ಬರುತ್ತಿವೆ. ಆದ್ದರಿಂದ ತೆರಿಗೆಯನ್ನು ಹಾಕಿದರೆ ಬೇರೆ ಕಡೆಯಿಂದ ಯಾರು ಮಾಲನ್ನು ಕಳುಹಿಸುತ್ತಾರೋ ಅವರ ಮೇಲೆ ಹೆಚ್ಚು ತೆರಿಗೆ ಬೀಳುತ್ತದೆ. ಅವರು ಮೂರು ಕಾಸು ತೆರಿಗೆ ಕೊಡುವ ಜೊತೆಗೆ ರವಾನೆ ಚಾರ್ಜನ್ನು ಕೂಡ ವಹಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಸರ್ಕಾರದವರಿಗೆ ಸ್ವಲ್ಪ ವರಮಾನ ಬರುವುದಲ್ಲದೆ

ಅದರ ಜೊತೆಗೆ Local Manufacturers ಕೈಪೋಟಿ ಕಡಿಮೆಯಾಗುತ್ತದೆ ಎಂದು ಬಹಳ ವಿನಯಪೂರ್ವಕ ವಾಗಿ ಅರಿಕೆಮಾಡಿಕೊಳ್ಳುತ್ತೇನೆ. ಬೀಡಿ ವ್ಯಾಪಾರಸ್ಥರಿಗೆ ಕಿರುಕುಳ ಜಾಸ್ತಿ ಆಗುತ್ತದೆ ಎಂಬ ವಾದವನ್ನು ಮಾನ್ಯಸದಸ್ಯರೊಬ್ಬರು ಈ ಸಭೆಯ ಮುಂದೆ ಇಟ್ಟರು. ಈಗಾಗಲೇ ತೆರಿಗೆಕೊಡುತ್ತಿದ್ದಾರೆ. ಇತ್ತೀಚಿನವರೆಗೆ ಮೂರು ಕಾಸಿನ ಮೇರೆಗೆ ಕೊಡುತ್ತಿದ್ದರು. ಆದರೆ ಏಪ್ರೆಲ್ ಒಂದರಿಂದ ಒಂದು ಕಾಸು ಕೊಡುತ್ತಿದ್ದಾರೆ. ಆದ್ದರಿಂದ ತೆರಿಗೆ ಕೊಡುವ ಜವಾಬ್ದಾರಿ ತಪ್ಪುವುದಿಲ್ಲ. ಇಲ್ಲಿಯವರೆಗೆ ಏನೇನು ಕಿರುಕುಳಗಳು, ತೊಂದರೆಗಳು, ಅನುಕೂಲತೆಗಳು ಇದ್ದವೋ ಅವು ಇನ್ನು ಮುಂದೆಯೂ ಇರುತ್ತವೆ. ಕಿರುಕುಳಗಳು ಜಾಸ್ತಿಯಾಗುವುದಿಲ್ಲ. ಶ್ರೀ ಶ್ರೀನಿವಾಸಅಯ್ಯಂಗಾರ್‌ರವರು ಮಾತನಾಡುವಾಗ ಈ ಮೈಸೂರಿನಲ್ಲಿರುವ ಕಾರ್ಖಾನೆಗಳಿಗೂ ಮತ್ತು ಈ ಮಸೂದೆಯಲ್ಲಿ ಅಡಗಿರತಕ್ಕ ನಿಬಂಧನೆಗಳಿಗೂ ಸಂಬಧವಿಲ್ಲವೆಂದು ಹೇಳಿದರು. ಬೀಡಿಯ ವಿಚಾರದಲ್ಲಿ ಅದು ಇಲ್ಲದಿರಬಹುದು. ಆದರೆ ಸೀಗರೇಟ್ ವಿಚಾರದಲ್ಲಿ ಆ ರೀತಿಯಿದೆ. ಬೀಡಿಯ ವಿಚಾರದಲ್ಲೂ ಕೂಡ ನಾನು 6 ಕಾಸು ಇದ್ದದ್ದನ್ನು 3 ಕಾಸಿಗೆ ಇಳಿಸಿದ್ದರಿಂದ ಸ್ವಲ್ಪಮಟ್ಟಿಗೆ ಈ ಬಿಲ್ಲಿನ ಧ್ಯೇಯೋದ್ದೇಶಗಳ ವಿವರಣೆಯಲ್ಲಿ par ಎಂದು ಹೇಳಿರುವುದಕ್ಕೆ ತದ್ವಿರುದ್ಧವಾಗಿದೆ.

300 per cent increase ಆಗಿದೆಯೆಂದು ಕೆಲವರು ಹೇಳಿದರು. ಇದುವರೆಗೂ 3 ಕಾಸನ್ನು ಕೊಡುತ್ತಲೇ ಇದ್ದರು ; ವಸೂಲು ಮಾಡುತ್ತಲೇ ಇದ್ದರು. ಇವೊತ್ತಿನವರೆಗೂ 3 ಕಾಸಿನಂತೆ ಕೊಡುತ್ತಿದ್ದವರಿಗೆ ಈಗ ಅದೇ ತೆರಿಗೆ ಇರಲಿ ಎಂದು ಹೇಳಿದರೆ ಶೇಕಡ 300 ಹೆಚ್ಚಿಸಿದಂತಾಗುವುದಿಲ್ಲ. ಹೊಸದಾಗಿ ತಿದ್ದುಪಡಿಯಾದ ಆಕ್ಟ್ ಪ್ರಕಾರ ವಸೂಲಾಗತಕ್ಕ ದರಗಳನ್ನು ಗಣನೆಗೆ ತೆಗೆದುಕೊಂಡರೆ ಮಾತ್ರ ಆ ರೀತಿ ಆಗುತ್ತದೆ. ಮನುಷ್ಯ ಒಂದು ಯಂತ್ರವಲ್ಲ. ಯಂತ್ರವಾಗಿದ್ದರೆ ಶಾಶ್ವತವಾದ ಕಾನೂನೊಂದನ್ನು ಮಾಡಿ ಬದಲಾವಣೆಗೆ ಅವಕಾಶವಿಲ್ಲದಂತೆ ಮಾಡಬಹುದಾಗಿತ್ತು. ಮಾನವ ಸ್ವಭಾವ ಈಗಿರುವ ರೀತಿಯಲ್ಲಿರುವವರೆಗೂ ಯಾವ ಕಾನೂನೇ ಆಗಲಿ ಶಾಶ್ವತವಾಗಿರುವುದಿಲ್ಲ. ಕಾಲಧರ್ಮಕ್ಕನುಸಾರವಾಗಿ ಅದು ಬದಲಾವಣೆಯಾಗಲೇಬೇಕು. ಮಾನ್ಯ ಮಿತ್ರರಾದ ಮುಲ್ಕ ಗೋವಿಂದರೆಡ್ಡಿಯವರು ಒಂದು ನಿಲುವಳಿ ಸೂಚನೆಯನ್ನು ತಂದಿದ್ದರು. ನೆಲಗಡಲೆಯ ವಿಚಾರದಲ್ಲಿ ಜನರಿಗೆ ತೊಂದರೆಯಾಗಿ ರೂಲ್ಸ್‌ಮಾಡಿರುವುದರಿಂದ ಅದನ್ನು ತಿದ್ದುಪಡಿ ಮಾಡಬೇಕೆಂಬುದೇ ಅವರ ಸೂಚನೆಯ ಸಾರಾಂಶವಾಗಿದೆ.

Sri Mulka GOVINDA REDDY.—My contention was that under the rule making power the clause that was introduced by the Government was repugnant to the spirit of the Act and was repugnant to the expressed wish of the legislature.

Sri Kadidal MANJAPPA.—Whatever may be his contention, the change is there. The rules were framed in accordance with the provisions contained in the Act. If the gentleman unreasonably contends that it is not so, what can I do ? At present the Minister is not drafting the legislation ; the experts are draftng the legislation.

Sri Mulka GOVINDA REDDY.—We are seeing the fate of legislative enactments and how they are being received in the Legislative Council.

Sri Kadidal MANJAPPA.—All right ; we will test it.

ಆದ್ದರಿಂದ ಕಾನೂನುಗಳ ಅವಶ್ಯಕತೆ ಬಿದ್ದಾಗ ತಿದ್ದುಪಡಿ ಮಾಡಲೇಬೇಕು. ತಮ್ಮ ಸಲಹೆಯ ಪ್ರಕಾರ ನೆಲಗಡಲೆಕಾಯಿನ ವ್ಯಾಪಾರಕ್ಕೆ ಸಂಬಂಧಪಟ್ಟ ವಿಚಾರವನ್ನೂ ಕೂಡ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ. ಆ ಬಗ್ಗೆ ಒಂದು ಮಸೂದೆಯನ್ನು ತಯಾರು ಮಾಡಬೇಕೆಂದು ಮಾಡಿದ್ದೇವೆ. ಯಾವ ವಿಚಾರದಲ್ಲೇ ಆಗಲಿ, ತಾವೇ ಆಗಲಿ, ಕಾನೂನು ರಚಿಸತಕ್ಕವರೇ ಆಗಲಿ ಬೃಹಸ್ಪತಿಗಳಲ್ಲ. ಯಾವುದೋ ಸನ್ನಿವೇಶದಲ್ಲಿ ಕಾನೂನು ಮಾಡುತ್ತೇವೆ. ಸನ್ನಿವೇಶ ಬದಲಾವಣೆಯಾದ ಹಾಗೆ ಬದಲಾವಣೆ ಮಾಡಬೇಕಾಗುತ್ತದೆ. ಅದಕ್ಕೆ ಸರ್ಕಾರದವರಿಗೆ ಬುದ್ಧಿ ಸ್ಥಿಮಿತವಾಗಿಲ್ಲವೆಂದು ಹೇಳುವುದು ಸರಿಯಲ್ಲ. ಶ್ರೀಮಾನ್ ಇಮಾಂಸಾಹೇಬರು ಮಂತ್ರಿಗಳಾಗಿದ್ದರು. ನಾನು ಆಗ ಸದಸ್ಯನಾಗಿದ್ದೆ. ಅದರಮೇಲೆ ತಿದ್ದುಪಡಿಗಳನ್ನು ತಂದು ಆ ಯುದ್ಧಕಾಲದಲ್ಲೇ ಅವರು ಎಷ್ಟೋ ಬದಲಾವಣೆಗಳನ್ನು ಮಾಡುತ್ತಿದ್ದರು. ಆಗ್ಯೆ ತಿದ್ದುಪಡಿಗಳು ಒಂದರಮೇಲೊಂದು ಕೊನೆ ಮೊದಲೇ ಇಲ್ಲದೆ ಬರುತ್ತಿದ್ದವು.

ಶ್ರೀಮಾನ್ ಇಮಾಂರವರು.—ಇಲ್ಲ, ಇಲ್ಲ. ನಮ್ಮ ಕಾಲದಲ್ಲಿ, ಒಂದು ಕಾನೂನು ಮಾಡಿದರೆ ಹತ್ತು ವರ್ಷಗಳಾದರೂ ತಿದ್ದುಪಡಿ ಮಾಡುತ್ತಿರಲಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ದೇಶದಲ್ಲಿ ಏನೇ ಬದಲಾವಣೆಯಾದರೂ ತಾವು ನೋಡಬೇಕಾದದ್ದೇ ಇರುತ್ತಿರಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಅವರ ಕಾಲದಲ್ಲಿ ನಾವು ಹೇಳುವುದೆಲ್ಲಾ ಅರಣ್ಯರೋದನ. ನಾವಾದರೋ ಯಾವುದಾದರೂ ಮಸೂದೆ ತರಬೇಕಾದರೆ ಬಹಳ ಯೋಚನೆಮಾಡಿ ತರುತ್ತೇವೆ. ಆಗಿನ ಕಾಲದಲ್ಲಿ ಯಾವ ಯೋಚನೆಯೂ ಇರುತ್ತಿರಲಿಲ್ಲ. ಮನಸ್ಸಿಗೆ ಬಂದಹಾಗೆ ಕಾನೂನು ಮಾಡುತ್ತಿದ್ದರು.

ಶ್ರೀ ಜೆ. ಮಹಮ್ಮದ್ ಇಮಾಂ.—ಈಗ ಸೆಕ್ರೆಟೆರಿಯವರೇ ಎಲ್ಲವನ್ನೂ ಮಾಡುತ್ತಿದ್ದಾರೆ. You are in the hands of the Secretaries.

A MEMBER.—Slab system ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಪದಾರ್ಥಕ್ಕೇ ಹೊಸದಾಗಿ Slab system ತರುವುದಕ್ಕಾಗುವುದಿಲ್ಲ. ಈಗ Slab system ಹಾಕಿರುವುದು Multi-pointಗೆ, ಅದನ್ನ ಇದಕ್ಕೂ ಅನ್ವಯಿಸಿದರೆ ತಂಬಾಕಿನವರಿಗೆ ತೊಂದರೆಯಾಗುತ್ತದೆ.

ಒಟ್ಟಿನಲ್ಲಿ ಬಹುಜನರ ಅಭಿಪ್ರಾಯದಲ್ಲಿ ಈ ಮಸೂದೆ ಚೆನ್ನಾಗಿದೆಯೆಂದು ಹೊರಪಟ್ಟಿದೆ. ಬೀಡಿ ಸೇದುವ ಜನರು ಇದುವರೆಗೆ ಎಷ್ಟು ಖರ್ಚುಮಾಡುತ್ತಿದ್ದರೋ ಅದಕ್ಕಿಂತ ಹೆಚ್ಚೇನೂ ಖರ್ಚುಮಾಡಬೇಕಾದ್ದಿಲ್ಲ. 1948ನೆಯ ಇಸವಿಯಿಂದ ಇದೇ ಪ್ರಕಾರ ಕೊಡುತ್ತಲೇ ಬಂದಿದ್ದರು. ಅದು ತಿದ್ದುಪಡಿಯಾಗಿ ಒಂದು ಕಾಸು ಎಂದು ಮಾಡಲಾಗಿತ್ತು. ಮದರಾಸಿನಲ್ಲಿ exempt ಮಾಡಿದ್ದಾರೆಂದು ಹೇಳಿ ನಮ್ಮಲ್ಲಿಯೂ ಕಡಮೆ ಮಾಡಬೇಕೆಂದು ವಾದ ಬಂದಿತ್ತು. ಈಗ ಮದರಾಸಿನವರು ಬೀಡಿಯನ್ನು exempt ಮಾಡದೆ

(ಶ್ರೀ ಕಡಿದಾಳ್ ಮಂಜಪ್ಪ.)

6 ಕಾಸುಗಳನ್ನು ವಿಧಿಸಿದ್ದಾರೆ. ಹೀಗಿರುವಾಗ ನಾವು 3 ಕಾಸನ್ನಾದರೂ ಕೊಡಿ ಎಂದು ಕೇಳುತ್ತಿದ್ದೇವೆ ಅಷ್ಟೆ. ಇದು ನ್ಯಾಯವಾಗಿದೆ. ತಾವಿದನ್ನು ಒಪ್ಪಿಕೊಳ್ಳಬೇಕು. ತಾವು ವಾದ ಮಾಡಬೇಕು ಎಂಬ ಮನಸ್ಸಿನಿಂದ ತಾವೇ ಬಡವರ ಪ್ರತಿನಿಧಿಗಳೆಂದು ತಿಳಿದು ವಾದ ಮಾಡಕೂಡದು. ಬಡವರ ಮೇಲೆ ನಮಗೂ ಮಮತೆಯಿದೆ. ಬಡತನದಿಂದಲೇ ಬಂದವರನೇಕರು ಇಲ್ಲಿದ್ದಾರೆ. ಆದ್ದರಿಂದ ಸೂಕ್ತವಾದ ಈ ಮಸೂದೆಯನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

Mr. SPEAKER.—Tha question is:

"That the Mysore Sales Tax (Second Amendment) Bill, 1955, be taken into consideration."

The motion was adopted.

Mr. SPEAKER.—Clauses of the Bill. Clause 2. The question is:

"That Clause 2 stand part of the Bill."

The motion was adopted.

Clause 2 was added to the Bill.

Mr. SPEAKER.—Clause 1, Title and Preamble. The question is:

"That Clause 1, title and preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri Kadidal MANJAPPA.—Sir, I move:

"That the Mysore Sales Tax (Second Amendment) Bill, 1955, be passed."

Mr. SPEAKER.—The question is:

"That the Mysore Sales-Tax (Second Amendment) Bill, 1955 be passed.

The motion was adopted.

MADRAS TOBACCO (TAXATION OF SALES AND REGISTRATION) (MYSORE AMENDMENT) BILL, 1955.

Motion to consider.

Sri Kadidal MANJAPPA (Minister for Revenue and Public Works).—Sir, I beg to move:

"That the Madras Tobacco (Taxation of Sales and Registration) (Mysore Amendment) Bill, 1955 be taken into consideration."

Sir, this is a measure similar to the one which we have just now passed. In Madras, the Madras Sales-Tax was in force and the rates which were being levied have been enhanced; on account of the amendment made in the Madras Act, by the Madras Government. Therefore in order to enhance the rate to be at par with the rates in Mysore, this Bill has been introduced.

Mr. SPEAKER.—Motion moved:

That the Madras Tobacco (Taxation of Sales and Registration) (Mysore Amendment) Bill, 1955 be taken into consideration.

Sri Mulka GOVINDA REDDY (Chitaldrug).—I want one clarification. After the merger of Bellary, what were the rates prevailing in Madras, Sir?

Sri Kadidal MANJAPPA.—I shall read the relevant provision in the Madras Tobacco (Taxation of Sales and Registration) Act, 1953, as in force in Bellary District."

"On sales of cigarettes not falling under sub-clause (1) above, the rates of tax shall be as follows.—

(i) On cigarettes which are sold by the person taxed at less than six pies per cigarette and are to be sold at the retail point to the consumer at not more than six pies per cigarette.	Ten per cent of the turnover.
(ii) On cigarettes which are sold by the person taxed at less than nine pies per cigarette, and are to be sold at retail point to the consumer at not more than nine pies per cigarette.	Twenty per cent of the turnover.
(iii) On sales of cigarettes not falling under items (i) or (ii) above.	Thirty per cent of the turnover."